11 August 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ


**ಭಾವನಾಂತರಂಗ**

ಮನಸ್ಸು ದೃಢ ನಿರ್ಧಾರವನ್ನು ಹೊಂದಿದ್ದರೆ, ಒಂದೊಂದು ಬಾರಿ ಹಣೆಬರಹವೂ ತನ್ನ ನಿರ್ಧಾರವನ್ನು ಬದಲಾಯಿಸಿ ಬಿಡಬಹುದು!

-ಸ್ನೇಹಾ ಆನಂದ್


info.varthaman@gmail.com





ಕಾರ್ಪೋರೇಟ್‌ಗಳೇ ಭಾರತ ಬಿಟ್ಟು ತೊಲಗಿ ಚಳವಳ — ಪುಟ ಸಂ. 2





ಟೌನ್‌ಶಿಪ್ ವಿರೋಧಿಸಿ ಪಾದಯಾತ್ರೆ: ಎರಡನೇ ದಿನಕ್ಕೆ ಮುಕ್ತಾಯ — ಪುಟ ಸಂ. 3





ಜನ ಕೊಟ್ಟ ಅಧಿಕಾರದ ಸಹಿಯನ್ನು ಡಿಕೆಶಿ ಮಾರಾಟಕ್ಕಿಟ್ಟಿದ್ದಾರೆ: ನಿಖಿಲ್ — ಪುಟ ಸಂ. 4



9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 247 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3


## 'ನೆಪಮಾತ್ರ'ಕ್ಕೆ ಬಿಡದಿ ಹೋರಾಟ!

### ವಿಜಯೇಂದ್ರ– ಮಧು ಬಂಗಾರಪ್ಪ ವಿಡಿಯೋ ವೈರಲ್



**ಬೆಂಗಳೂರು:** ಬಿಡದಿ ಟೌನ್‌ಶಿಪ್ ಯೋಜನೆ ಬಗ್ಗೆ ಸಚಿವ ಮಧು ಬಂಗಾರಪ್ಪ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿರುವ ವಿಡಿಯೋ ವನ್ನು ಕಾಂಗ್ರೆಸ್ ಪಕ್ಷ ಬಿಡುಗಡೆ ಮಾಡಿದೆ. ಜೆಡಿಎಸ್ ಪಾದಯಾತ್ರೆ ಬಗ್ಗೆ ಬಿಜೆಪಿಗಿರುವ ಅಭಿಪ್ರಾಯ ಈಗ ಬಯಲಾಗಿದೆ ಎಂದು ತಿರುಗೇಟು ನೀಡಿದೆ.

ಬಿಡದಿ ಟೌನ್ ಶಿಪ್ ವಿಚಾರದಲ್ಲಿ ಪ್ರತಿಭಟನೆ ಮಾಡುತ್ತಿದ್ದ ರೈತರೂ ಪರಿಹಾರಕ್ಕೆ ಒಪ್ಪಿದ್ದಾರೆ. ಈ ಯೋಜನೆ ವಿರುದ್ಧದ ಪಾದಯಾತ್ರೆಗೆ ಬಿಜೆಪಿ ನೈತಿಕ ಬೆಂಬಲ ಅಷ್ಟೇ ನೀಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರೇ ಮಧು ಬಂಗಾರಪ್ಪಗೆ ಹೇಳಿದ್ದಾರೆ ಎಂದು ಕಾಂಗ್ರೆಸ್ ಎಕ್ಸ್‌ನಲ್ಲಿ ವಿಡಿಯೋ ಸಮೇತ ಪುಟ 2ಕ್ಕೆ

## ಸಚಿವ ನಾಗೇಂದ್ರಗೆ ಹೈಕೋರ್ಟ್ ರಿಲೀಫ್




**ಬೆಂಗಳೂರು:** ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಅಕ್ರಮ ಹಣ ವರ್ಗಾವಣೆ ಹಗರಣದ ಆರೋಪ ಎದುರಿಸುತ್ತಿರುವ ಸಚಿವ ಬಿ.ನಾಗೇಂದ್ರ ಅವರಿಗೆ ಹೈಕೋರ್ಟ್ ಬಿಗ್ ರಿಲೀಫ್ ನೀಡಿದೆ.

ವಿಶೇಷ ನ್ಯಾಯಾಲಯ ನಾಗೇಂದ್ರ ಅವರಿಗೆ ಜಾಮೀನು ನೀಡುವಾಗ ನ್ಯಾಯಾಲಯದ ಅನುಮತಿಯಿಲ್ಲದೆ ರಾಜ್ಯ ಬಿಟ್ಟು ತೆರಳಬಾರದು ಎಂದು ವಿಧಿಸಿದ್ದ ಷರತ್ತಿಗೆ ಹೈಕೋರ್ಟ್ ತಡೆ ನೀಡಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ 2024ರ ಅಕ್ಟೋಬರ್ 14ರಂದು ಪುಟ 2ಕ್ಕೆ

## ಜಲಾಶಯಗಳ ನೀರಿನ ಮಟ್ಟ

| ಕೆ ಆರ್ ಎಸ್ | |
|---|---|
| ಗರಿಷ್ಠ ಮಟ್ಟ | 124.80 ಅಡಿ |
| ಇಂದಿನ ಮಟ್ಟ | 109 ಅಡಿ |
| ಒಳಹರಿವು | 10237 ಕ್ಯುಸೆಕ್ |
| ಹೊರ ಹರಿವು | 2361 ಕ್ಯುಸೆಕ್ |
| **ಕಬಿನಿ ಜಲಾಶಯ** | |
| ಗರಿಷ್ಠ ಮಟ್ಟ | 2284 ಅಡಿ |
| ಇಂದಿನ ಮಟ್ಟ | 2283.04 ಅಡಿ |
| ಒಳಹರಿವು | 12044 ಕ್ಯುಸೆಕ್ |
| ಹೊರ ಹರಿವು | 12000 ಕ್ಯುಸೆಕ್ |
| **ಹಾರಂಗಿ ಜಲಾಶಯ** | |
| ಗರಿಷ್ಠ ಮಟ್ಟ | 2859 ಅಡಿ |
| ಇಂದಿನ ಮಟ್ಟ | 2858.22 ಅಡಿ |
| ಒಳಹರಿವು | 6571 ಕ್ಯುಸೆಕ್ |
| ಹೊರ ಹರಿವು | 7125 ಕ್ಯುಸೆಕ್ |
| **ಹೇಮಾವತಿ ಜಲಾಶಯ** | |
| ಗರಿಷ್ಠ ಮಟ್ಟ | 2922 ಅಡಿ |
| ಇಂದಿನ ಮಟ್ಟ. | 2915.17 ಅಡಿ |
| ಒಳಹರಿವು | 3117 ಕ್ಯುಸೆಕ್ |
| ಹೊರಹರಿವು | 500 ಕ್ಯುಸೆಕ್ |

## ಶೀಘ್ರವೇ ಖಾತೆ ಹಂಚಿಕೆ ಪ್ರಕ್ರಿಯೆ

### ಹೈಕಮಾಂಡ್ ಜೊತೆ ಚರ್ಚಿಸಿ ಸಿಎಂ ನಿರ್ಧಾರ: ಪರಮೇಶ್ವರ್

**ಬೆಂಗಳೂರು:** ನೂತನ ಸಚಿವರಿಗೆ ಖಾತೆ ಹಂಚಿಕೆ ಕುರಿತು ಯಾವುದೇ ಗೊಂದಲವಿಲ್ಲ. ಈ ಪ್ರಕ್ರಿಯೆ ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ ಎಂದು ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ್ ತಿಳಿಸಿದರು.



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಹೈಕಮಾಂಡ್ ಜೊತೆ ಚರ್ಚಿಸಲು ನವದೆಹಲಿಗೆ ಹೋಗಿದ್ದಾರೆ. ಅವರು ಮರಳಿ ಬಂದ ನಂತರ ಖಾತೆಗಳನ್ನು ಘೋಷಿಸಬಹುದು ಎಂದರು.

ನಮ್ಮಲ್ಲಿ ಯಾವುದೇ ಗೊಂದಲವಿಲ್ಲ. ಹೈಕಮಾಂಡ್ ಜೊತೆ ಚರ್ಚಿಸಿದ ನಂತರ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಸಿಎಂ ದೆಹಲಿಗೆ ಹೋಗಿದ್ದಾರೆ. ಅವರು ವಾಪಸ್ ಬಂದ ನಂತರ ಖಾತೆಗಳ ಹಂಚಿಕೆ ಘೋಷಣೆ ಮಾಡುವ ಭರವಸೆಯಿದೆ.

ವಿಧಾನಮಂಡಲ ಅಧಿವೇಶನದಲ್ಲಿ ಪ್ರಶ್ನೆಗಳನ್ನು ಸಿದ್ಧಪಡಿಸುವುದು ಮತ್ತು ಉತ್ತರಿಸುವುದು ಸಚಿವರಿಗೆ ಕಷ್ಟವಾಗುವುದಿಲ್ಲವೇ ಎಂಬ ಪ್ರಶ್ನೆಗೆ ಉತ್ತರಿಸಿದ ಪರಮೇಶ್ವರ್, ಅವರೆಲ್ಲರೂ ಸಮರ್ಥರಿರುವುದರಿಂದ ಮತ್ತು ಅವರಿಗೆ ಸಹಾಯ ಮಾಡಲು ಹಿರಿಯರು ಇರುವುದರಿಂದ ಪುಟ 2ಕ್ಕೆ

## ಅತೃಪ್ತರಿಗೆ ನಿಗಮ–ಮಂಡಳಿ ಸ್ಥಾನ

### ಸಚಿವ ಸಂಪುಟ ಪುನರ್ ರಚನೆ ಬದಲಿಗೆ ಮನವೊಲಿಕೆ ಯತ್ನ

**ಬೆಂಗಳೂರು:** ಸಚಿವ ಸ್ಥಾನ ಸಿಗದ ಕಾರಣಕ್ಕೆ ಬಂಡಾಯದ ಬಾವುಟ ಬೀಸಿರುವ ಹಲವು ಅತೃಪ್ತ ಶಾಸಕರಿಗೆ ಪ್ರಮುಖ ನಿಗಮ–ಮಂಡಳಿಗಳ ಅಧ್ಯಕ್ಷ ಸ್ಥಾನ ನೀಡುವ ಸಾಧ್ಯತೆ ಬಗ್ಗೆ ಚರ್ಚೆ ನಡೆದಿದೆ.

ಸಚಿವ ಸಂಪುಟದಲ್ಲಿ ಮತ್ತೆ ಬದಲಾವಣೆ ಮಾಡುವುದು ಜೇನುಗೂಡಿಗೆ ಕೈಹಚ್ಚಿದಂತೆ. ಇದರ ಬದಲಿಗೆ ಅತೃಪ್ತರ ಮನವೊಲಿಸಿ ಅವರಿಗೆ ನಿಗಮ– ಮಂಡಳಿಯಲ್ಲಿ ಅವಕಾಶ ಕಲ್ಪಿಸುವ ಬಗ್ಗೆ ಚರ್ಚೆ ನಡೆಯುತ್ತಿದೆ.

ಅತೃಪ್ತ ಶಾಸಕರಾದ ಯಶವಂತ ರಾಯಗೌಡ ಪಾಟೀಲ್, ಅಪ್ಪಾಜಿ ಸಿ.ಎಸ್. ನಾಡಗೌಡ, ಶರತ್ ಬಚ್ಚೇಗೌಡ, ಎಸ್.ಆರ್. ಶ್ರೀನಿವಾಸ್, ಬಿ.ಜಿ. ಗೋವಿಂದಪ್ಪ, ಬೇಳೂರು ಗೋಪಾಲಕೃಷ್ಣ, ಜಿ.ಎಸ್. ಪಾಟೀಲ್, ಬಿ.ಆರ್. ಪಾಟೀಲ್ ಹಾಗೂ ಕಂಪ್ಲಿ ಶಾಸಕ ಗಣೇಶ್ ಸೇರಿದಂತೆ ಹಲವು ನಾಯಕರ ಹೆಸರು ಕೇಳಿಬರುತ್ತಿವೆ.

ಮಾಜಿ ಸಚಿವ ಎನ್.ಎಸ್. ಬೋಸರಾಜು ಅವರ ಪುತ್ರ ರವಿ ಬೋಸರಾಜು ಅವರಿಗೂ ಪ್ರಮುಖ ಸ್ಥಾನ ನೀಡುವ ಸಾಧ್ಯತೆಯಿದೆ ಎನ್ನಲಾಗಿದೆ. ಕೃಷ್ಣಪ್ಪ ಅವರ ಪುತ್ರ ಹಾಗೂ ಗೋವಿಂದರಾಜನಗರ ಶಾಸಕ ಪ್ರಿಯ ಕೃಷ್ಣ ಅವರನ್ನು ಬೆಂಗಳೂರಿನ ಅಭಿವೃದ್ಧಿ ಪ್ರಾಧಿಕಾರದ ಪೈಕಿ ಒಂದರ ಪ್ರಮುಖ ಹುದ್ದೆಗೆ ನೇಮಿಸುವ ಸಾಧ್ಯತೆಯಿದೆ. ಟಿ.ಬಿ. ಜಯಚಂದ್ರ ಅವರನ್ನು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರನ್ನಾಗಿ ನೇಮಿಸುವ ಬಗ್ಗೆ ಚರ್ಚೆ ನಡೆದಿದೆ ಎಂದು ತಿಳಿದು ಬಂದಿದೆ.

ಶಾಸಕ ತನ್ವೀರ್ ಸೇಠ್ ಹಾಗೂ ಶಾಂತಿನಗರ ಶಾಸಕ ಎನ್.ಎ. ಹ್ಯಾರಿಸ್ ಅವರನ್ನು ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಹುದ್ದೆಗೆ ಪರಿಗಣಿಸಲಾಗುತ್ತಿದೆ ಎನ್ನಲಾಗಿದೆ. ಪುಟ 2ಕ್ಕೆ

## ಟೌನ್‌ಶಿಪ್‌ಗೆ ಎಚ್‌ಡಿಕೆ ಪಿತಾಮಹ: ಎಂ.ಬಿ.ಪಾಟೀಲ್



**ವಿಜಯಪುರ:** ಎಚ್.ಡಿ.ಕುಮಾರಸ್ವಾಮಿ ಸಿಎಂ ಆಗಿದ್ದಾಗ ತಮ್ಮ ಕನಸಿನ ಕೂಸು ಬಿಡದಿ ಟೌನ್‌ಶಿಪ್‌ಗೆ ಯೋಜನೆಗೆ ಜನ್ಮ ನೀಡಿದರು. ಹೀಗಾಗಿ ಬಿಡದಿ ಟೌನ್‌ಶಿಪ್‌ಗೆ ಕುಮಾರಸ್ವಾಮಿ ಅವರೇ ಪಿತಾಮಹ ಎಂದು ಸಚಿವ ಎಂ.ಬಿ ಪಾಟೀಲ್ ತಿಳಿಸಿದ್ದಾರೆ.

ಜೆಡಿಎಸ್ ಹಾಗೂ ಬಿಜೆಪಿ ಬಿಡದಿ ಪಾದಯಾತ್ರೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಇದೆಲ್ಲ ನಾಟಕ ಮಾಡ್ತಿದ್ದಾರೆ. ಇದು ರಾಜಕೀಯಕ್ಕಾಗಿ ನಡೆದಿದೆ ಅಷ್ಟೇ. ಇದು ಎಚ್‌ಡಿಕೆ ಅವರ ಕನಸಿನ ಕೂಸು. ತಾವು ಸಿಎಂ ಆಗಿದ್ದಾಗ ಬಿಡದಿ ಟೌನ್‌ಶಿಪ್‌ಗೆ ಜನ್ಮ ನೀಡಿ, ಪಿತಾಮಹರಾದರು. ಈಗ ಅವರೇ ಇದಕ್ಕೆ ವಿರೋಧ ಮಾಡ್ತಿದ್ದಾರೆ ಎಂದರು.

ಸಚಿವ ನಾಗೇಂದ್ರ ನ್ಯಾಯಾಲಯ ನಿಯಮ ಉಲ್ಲಂಘನೆ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. ಅದರ ಬಗ್ಗೆ ಮಾಹಿತಿ ಪಡೆದು ಮಾತನಾಡುತ್ತೇನೆ ಎಂದರು.


# ಖಾತೆ ಹಂಚಿಕೆ ಬಿಕ್ಕಟ್ಟು: ಸಿಕ್ಕಿಲ್ಲ ಹೈಕಮಾಂಡ್ 'ಗ್ರೀನ್‌ಸಿಗ್ನಲ್'

### ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜೊತೆ ತಡರಾತ್ರಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚರ್ಚೆ

**ನವದೆಹಲಿ:** ಸಚಿವ ಸಂಪುಟ ವಿಸ್ತರಣೆ ಆಗಿ ಒಂದು ವಾರ ಕಳೆದರೂ ನೂತನ ಸಚಿವರಿಗೆ ಖಾತೆ ಹಂಚಿಕೆಗೆ ಕಾಂಗ್ರೆಸ್ ಹೈಕಮಾಂಡ್ ಇನ್ನೂ ಗ್ರೀನ್‌ಸಿಗ್ನಲ್ ನೀಡಿಲ್ಲ. ಆ.13ರಿಂದ ವಿಧಾನಮಂಡಲ ಅಧಿವೇಶನ ಇರುವುದರಿಂದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಈ ಬಿಕ್ಕಟ್ಟಿನಿಂದ ಹೊರಬರಲು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಮುಂದಾಗಿದ್ದಾರೆ. ನವದೆಹಲಿಗೆ ತೆರಳಿರುವ ಡಿಕೆಶಿ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಭಾನುವಾರ ತಡರಾತ್ರಿ ಸಂಪುಟ ಪುನರ್ ರಚನೆ ಮತ್ತು ಹೊಸದಾಗಿ ಸೇರ್ಪಡೆಗೊಂಡ ಸಚಿವರಿಗೆ ಖಾತೆಗಳ ಹಂಚಿಕೆ ಕುರಿತು ಚರ್ಚೆ ನಡೆಸಿದರು ಎನ್ನಲಾಗಿದೆ.

ಸಚಿವ ಸ್ಥಾನ ವಂಚಿತ ಹಿರಿಯ ಶಾಸಕರ ಅಸಮಾಧಾನ ತಣಿಸುವುದು ಹಾಗೂ ನೂತನ ಸಚಿವರಿಗೆ ಖಾತೆ ಹಂಚಿಕೆ ಮಾಡುವ ವಿಚಾರದಲ್ಲಿ ಸಿಎಂ ಡಿಕೆ ಶಿವಕುಮಾರ್ ಸಾಕಷ್ಟು ಕಸರತ್ತು ನಡೆಸುತ್ತಿದ್ದಾರೆ. ವಿಧಾನಮಂಡಲ ಅಧಿವೇಶನ ಆರಂಭವಾಗಲಿರುವ ಹಿನ್ನೆಲೆಯಲ್ಲಿ ಅದಕ್ಕೂ ಮುನ್ನ ಖಾತೆ ಹಂಚಿಕೆ ಪೂರ್ಣಗೊಳಿಸುವ ಒತ್ತಡವೂ ಹೆಚ್ಚಾಗಿದೆ.



ದೆಹಲಿಗೆ ಭಾನುವಾರ ರಾತ್ರಿ ತೆರಳಿದ ಡಿಕೆ ಶಿವಕುಮಾರ್, ರಾತ್ರಿ 11 ಗಂಟೆ ವೇಳೆಗೆ ರಾಜಾಜಿ ಮಾರ್ಗದಲ್ಲಿರುವ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸಕ್ಕೆ ತೆರಳಿ ಮಾತುಕತೆ ನಡೆಸಿದರು. ಖರ್ಗೆ ಭೇಟಿ ಬಳಿಕ ಮಾತನಾಡಿದ ಸಿಎಂ, ಖಾತೆ ಹಂಚಿಕೆ ಕುರಿತು ಏನು ಮಾಡಬೇಕೆಂದು ಹೈಕಮಾಂಡ್ ತಿಳಿಸುತ್ತದೆ ಎಂದು ಹೇಳಿದರು. ಸಚಿವ ಸಂಪುಟಕ್ಕೆ ಹೊಸದಾಗಿ ಸೇರ್ಪಡೆ ಗೊಂಡ ಇಬ್ಬರು ಸಚಿವರಾದ ಪುಟ 2ಕ್ಕೆ

### ಎಲ್ಲ ಖಾತೆಗಳ ಬಗ್ಗೆಯೂ ನಾನೊಬ್ಬನೇ ಉತ್ತರಿಸುವೆ: ಡಿಕೆಶಿ

ವಿಧಾನಮಂಡಲ ಅಧಿವೇಶನ ಆರಂಭವಾಗುತ್ತಿದ್ದರೂ ಸಚಿವರಿಗೆ ಖಾತೆ ಹಂಚಿಕೆಯಾಗಿಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, ಶೀಘ್ರದಲ್ಲೇ ಖಾತೆಗಳನ್ನು ಹಂಚಿಕೆ ಮಾಡಲಾಗುವುದು. ಪುಟ 2ಕ್ಕೆ

## 55 ಕೋಟಿ ಡ್ರಗ್ಸ್ ಜಪ್ತಿ: 39 ಪೆಡ್ಲರ್‌ಗಳ ಬಂಧನ

**ಬೆಂಗಳೂರು:** ಸಿಲಿಕಾನ್ ಸಿಟಿ ಪೊಲೀಸರು ಮಾದಕ ವಸ್ತುಗಳ ಜಾಲವನ್ನು ಪತ್ತೆ ಹಚ್ಚಿ 55.8 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ. 8 ವಿದೇಶಿಯರು ಸೇರಿದಂತೆ 39 ಮಂದಿಯನ್ನು ಬಂಧಿಸಿದ್ದಾರೆ.

ಬೆಂಗಳೂರು ಪೊಲೀಸರು ನಡೆಸಿದ ಭರ್ಜರಿ ಕಾರ್ಯಾಚರಣೆಯಲ್ಲಿ 55.8 ಕೋಟಿ ರೂ. ಮೌಲ್ಯದ 200 ಕೆ.ಜಿಗೂ ಅಧಿಕ ಡ್ರಗ್ಸ್ ಜಪ್ತಿ ಮಾಡಲಾಗಿದೆ.

ಸಿಸಿಬಿ ಸೇರಿದಂತೆ ನಗರದ 16 ಪೊಲೀಸ್ ಯೂನಿಟ್‌ಗಳು ಎರಡು ವಾರಗಳಿಂದ ಸರಣಿ ದಾಳಿ ಮುಂದುವರೆಸಿವೆ. ಈ ವೇಳೆ ಪೆಡ್ಲರ್‌ಗಳಿಂದ ಭಾರೀ ಪ್ರಮಾಣದ ವಿವಿಧ ಮಾದಕ ವಸ್ತುಗಳನ್ನು ಸೀಜ್ ಮಾಡಿದ್ದಾರೆ.

ಕಾರ್ಯಾಚರಣೆಯಲ್ಲಿ ಅಮೃತಹಳ್ಳಿ ಪೊಲೀಸರು ಬರೋಬ್ಬರಿ 28.8 ಕೋಟಿ




ರೂ. ಮೌಲ್ಯದ ಎಂಡಿಎಂಎ ಜಪ್ತಿ ಮಾಡಿದ್ದಾರೆ. ಪ್ರಕರಣದ ಬೆನ್ನುಬಿದ್ದ ಪೊಲೀಸರು ಕಳೆದ ಹತ್ತು ದಿನಗಳಿಂದ ದೆಹಲಿಯಲ್ಲಿ ಬೀಡುಬಿಟ್ಟು, ದೆಹಲಿಯಲ್ಲೇ ಮಾದಕ ವಸ್ತು ತಯಾರಿಸಿ ಬೆಂಗಳೂರಿನ ವಿದ್ಯಾರ್ಥಿಗಳು ಹಾಗೂ ಸ್ಥಳೀಯರಿಗೆ ಸರಬರಾಜು ಮಾಡುತ್ತಿದ್ದ ದೆಹಲಿ ಮೂಲದ ಆಮ್ನೀ ಸಿಂಗ್ ಹಾಗೂ ನೈಜೀರಿಯಾ ಮೂಲದ ಓಬಮ್ ಅವರನ್ನು ಹೆಡೆಮುರಿಕಟ್ಟಿದ್ದಾರೆ.

## ಕಾವೇರಿ: 13ರಂದು ತ.ನಾಡು ಅರ್ಜಿ ವಿಚಾರಣೆ

**ನವದೆಹಲಿ:** ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶದಂತೆ ತಕ್ಷಣವೇ ನೀರು ಹರಿಸಲು ಕರ್ನಾಟಕಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ತಮಿಳುನಾಡು ಸರ್ಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಗುರುವಾರ ಆ.13ರಂದು ನಡೆಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ತಮಿಳುನಾಡು ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಸಿ.ಎಸ್. ವೈದ್ಯನಾಥನ್ ಅವರು ವಿಷಯವನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠದ ಮುನ್ನೆಲೆಗೆ ತಂದು ತುರ್ತು ವಿಚಾರಣೆಗೆ ಮನವಿ ಮಾಡಿದರು. ಈ ಮನವಿಯನ್ನು ಆಲಿಸಿದ ನ್ಯಾಯಪೀಠ ಗುರುವಾರ ವಿಚಾರಣೆ ಕೈಗೆತ್ತಿಕೊಳ್ಳುವುದಾಗಿ ತಿಳಿಸಿತು.

ಜುಲೈ 30ರಂದು ನಡೆದ ಸಭೆಯಲ್ಲಿ, ಕರ್ನಾಟಕದ ಕಬಿನಿ ಹಾಗೂ ಕೃಷ್ಣರಾಜ ಸಾಗರ ಜಲಾಶಯಗಳಿಂದ ದಿನಕ್ಕೆ 3,500 ಕ್ಯೂಸೆಕ್‌ನಂತೆ 15 ದಿನಗಳ ಕಾಲ ನೀರು ಬಿಡುವಂತೆ ಕಾವೇರಿ ನೀರು ನಿರ್ವಹಣಾ




ಪ್ರಾಧಿಕಾರ ಆದೇಶಿಸಿತ್ತು. ಈ ನಿರ್ಧಾರವನ್ನು ಜಾರಿ ಮಾಡುವಂತೆ ತಮಿಳುನಾಡು ಸರ್ಕಾರ ಆಗಸ್ಟ್ 3ರಂದು ಸುಪ್ರೀಂ ಕೋರ್ಟ್ಗೆ ಅರ್ಜಿ ಸಲ್ಲಿಸಿತ್ತು.

ದಿನಕ್ಕೆ 3,500 ಕ್ಯೂಸೆಕ್‌ನಂತೆ 15 ದಿನಗಳಿಗೆ ಒಟ್ಟು 4.536 ಟಿಎಂಸಿ ನೀರನ್ನು ಆಗಸ್ಟ್ 12ರೊಳಗೆ ಬಿಡುಗಡೆ ಮಾಡಲು ಕರ್ನಾಟಕಕ್ಕೆ ನಿರ್ದೇಶನ ನೀಡಬೇಕೆಂದು ತಮಿಳುನಾಡು ಕೋರಿದೆ. ರಾಜ್ಯದ ವಿರೋಧ ಪಕ್ಷವಾದ ದ್ರಾವಿಡ ಮುನ್ನೇತ್ರ ಕಳಗಂ ಕೂಡ ಇದೇ ರೀತಿಯ ಪ್ರತ್ಯೇಕ ಅರ್ಜಿಯೊಂದನ್ನು ಸುಪ್ರೀಂ ಕೋರ್ಟ್ಗೆ ಸಲ್ಲಿಸಿದೆ.

## ರಾಜಕೀಯಕ್ಕಾಗಿ ಜೆಡಿಎಸ್ ಪಾದಯಾತ್ರೆ: ಬಂಗಾರಪ್ಪ

**ಬೆಂಗಳೂರು:** ರಾಜಕೀಯಕ್ಕಾಗಿ ಬಿಡದಿ ಪಾದಯಾತ್ರೆ ಮಾಡ್ತಿದ್ದಾರೆ ಎಂದು ಜೆಡಿಎಸ್ ಪಾದಯಾತ್ರೆಗೆ ಸಚಿವ ಮಧು ಬಂಗಾರಪ್ಪ ಟೀಕಿಸಿದರು.




ಬೆಂಗಳೂರಿನಲ್ಲಿ ಮಾತನಾಡಿದ ಅವರು, ಸಿಎಂ ಕೂಡ ಒತ್ತಾಯ ಪೂರ್ವಕವಾಗಿ ಭೂಮಿ ಪಡೆಯಲ್ಲ ಅಂದಿದ್ದಾರೆ. ಜೆಡಿಎಸ್– ಬಿಜೆಪಿ ಅವರು ರಾಜಕೀಯಕ್ಕೆ ಮಾಡ್ತಿದ್ದಾರೆ ಅನ್ನಿಸುತ್ತದೆ. ಬೇರೆ ವಿಷಯ ಇದೆ ಚರ್ಚೆ ಮಾಡಲಿ. ಸಿಎಂ ಈಗಾಗಲೇ ಸ್ಪಷ್ಟವಾಗಿ ಹೇಳಿದ್ದರೂ ರಾಜಕೀಯಕ್ಕೆ ಪಾದಯಾತ್ರೆ ಮಾಡೋದು ಸರಿಯಲ್ಲ ಎಂದರು.

ಸಚಿವರಿಗೆ ಖಾತೆ ಪುಟ 2ಕ್ಕೆ

## ವಿರೋಧ ಪಕ್ಷಗಳಿಗೆ ಸದನದಲ್ಲಿ ಉತ್ತರ: ಸಚಿವ ಲಾಡ್ ಹೇಳಿಕೆ


**ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿಚಾರವಾಗಿ ಸದನದಲ್ಲಿ ವಿಪಕ್ಷಗಳು ಚರ್ಚೆ ಮಾಡಲಿ ಸರ್ಕಾರ ಉತ್ತರ ಕೊಡುತ್ತದೆ ಎಂದು ಸಚಿವ ಸಂತೋಷ್ ಲಾಡ್ ಹೇಳಿದರು.



ಬಿಡದಿ ಟೌನ್ ಶಿಪ್ ಬಗ್ಗೆ ವಿಪಕ್ಷಗಳು ಸದನದಲ್ಲಿ ಚರ್ಚೆ ಮಾಡಲಿ. ಎಲ್ಲವನ್ನು ತೆರೆದಿಡುವ ಕೆಲಸ ಸದನದಲ್ಲಿ ಮಾಡ್ತೀವಿ. ಅವರು ಚರ್ಚೆ ಮಾಡಲಿ ನಾವು ಅದಕ್ಕೆ ಸದನದಲ್ಲಿ ಉತ್ತರ ಕೊಡ್ತೀವಿ ಎಂದು ತಿಳಿಸಿದರು. ರಾಮ ಮಂದಿರದಲ್ಲಿ ಲೂಟಿ ಹೊಡೆದವರು ನಾಗೇಂದ್ರ ಬಗ್ಗೆ ಮಾತನಾಡುತ್ತಾರೆ. ಕೋವಿಡ್ ಸಮಯದಲ್ಲಿ ಪಿಎಂ ಫಂಡ್ ಅಂತ 20 ಸಾವಿರ ಕೋಟಿ ಕಲೆಕ್ಟ್ ಮಾಡಿದ್ದರು. ಅದರ ಬಗ್ಗೆ ಉತ್ತರ ಕೊಡ ಲಿಲ್ಲ. ನಾಗೇಂದ್ರ ವಿಚಾರ ಸದನದಲ್ಲಿ ಚರ್ಚೆ ಮಾಡಲಿ, ಅದಕ್ಕೆ ನಾವು ಉತ್ತರ ಕೊಡುತ್ತೇವೆ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

## ತಗ್ಗಿದ ಮುಂಗಾರು

**ಬೆಂಗಳೂರು:** ರಾಜ್ಯದಲ್ಲಿ ಮುಂಗಾರು ಮಳೆ ಸಂಪೂರ್ಣ ತಗ್ಗಿದೆ. ಮಳೆಯ ಪ್ರಮಾಣ ಕಡಿಮೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮುಂದಿನ ವಾರ ರಾಜ್ಯದ ಕೆಲವೆಡೆ ಮಾತ್ರ



ತುಂತುರು ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಪುಟ 2ಕ್ಕೆ



# ಡಿಕೆಶಿ ವಿರುದ್ಧ ಗೌಡರ ವಾಗ್ದಾಳಿ

### ರೈತರ ಹೊಟ್ಟೆ ಮೇಲೆ ಹೊಡೆದು ಟೌನ್‌ಶಿಪ್ ಬೇಡ: ಎಚ್.ಡಿ.ದೇವೇಗೌಡ

**ರಾಮನಗರ:** ರೈತರ ಹೊಟ್ಟೆ ಮೇಲೆ ಹೊಡೆದು ಬಿಡದಿ ಟೌನ್‌ಶಿಪ್ ನಿರ್ಮಿಸಬಾರದು ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು.

ಬಿಡದಿಯಿಂದ ಆರಂಭವಾದ ಜೆಡಿಎಸ್ ಪಾದಯಾತ್ರೆಯಲ್ಲಿ ಸೋಮವಾರ ಭಾಗವಹಿಸಿ ಮಾತನಾಡಿದ ಅವರು, ಗ್ರೇಟರ್ ಬೆಂಗಳೂರು ಟೌನ್‌ಶಿಪ್ ಯೋಜನೆ ಮತ್ತು ಭೂಸ್ವಾಧೀನ ಪ್ರಕ್ರಿಯೆ ವಿರುದ್ಧ ಕಿಡಿಕಾರಿದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಲವಂತದ ಭೂಸ್ವಾಧೀನ ಇಲ್ಲವೆಂದು ಹೇಳುತ್ತಲೇ 3 ಕೋಟಿ ನೀಡುತ್ತೇವೆ ಎಂದು ಬೆಲೆ ಹೆಚ್ಚಳ ಮಾಡಿ ಆಮಿಷವೊಡ್ಡುತ್ತಿದ್ದಾರೆ. ಸರ್ಕಾರ 9,600 ಎಕರೆ ಭೂಮಿಯನ್ನು ಆಕ್ರಮಣ ಮಾಡಲು ಹೊರಟಿದೆ. ಬಡ ರೈತರ ಹೊಟ್ಟೆ ಮೇಲೆ ಹೊಡೆಯುವ ಈ ಯೋಜನೆಯನ್ನು ತಕ್ಷಣವೇ ಕೈಬಿಡಬೇಕು ಎಂದು ಡಿಕೆ ಶಿವಕುಮಾರ್ ಅವರಿಗೆ ಕೈಮುಗಿದು ಮನವಿ ಮಾಡುತ್ತೇನೆ ಎಂದರು.

ಬೆಂಗಳೂರಿನಲ್ಲಿ ಈಗಾಗಲೇ ಸಹಸ್ರಾರು ಸೈಟ್‌ಗಳು ಮತ್ತು ನಿರ್ಮಿಸಲಾದ ಮನೆಗಳು ಖಾಲಿ ಬಿದ್ದಿವೆ. ಅವುಗಳನ್ನು ಕೊಳ್ಳುವವರೇ ಇಲ್ಲದಿರುವಾಗ, ರೈತರ ಸಣ್ಣ ಜಮೀನುಗಳನ್ನು ಕಸಿದುಕೊಂಡು ಯಾರ ಒಳ್ಳೆಗಾಗಿ ಟೌನ್‌ಶಿಪ್ ಮಾಡಲು ಹೊರಟಿದ್ದೀರಿ ಎಂದು ಪ್ರಶ್ನಿಸಿದರು. ಇದೇ ವೇಳೆ ಸಿಎಂ ಅವರು ಸಮಿತಿ ರಚಿಸುವ ಮುನ್ನ ಬೆಂಗಳೂರಿನ ಖಾಲಿ ಸೈಟ್‌ಗಳ ಅಂಕಿಅಂಶಗಳನ್ನು ಪರಿಶೀಲಿಸಲಿ ಎಂದು ಸಲಹೆ ನೀಡಿದರು.

### ನನ್ನ ಬುದ್ಧಿಗೆ ವಯಸ್ಸಾಗಿಲ್ಲ

ನನಗೆ ವಯಸ್ಸಾಗಿದೆಯೇ ಹೊರತು ನನ್ನ ಬುದ್ಧಿಗೆ ವಯಸ್ಸಾಗಿಲ್ಲ. ಈ ಇಳಿವಯಸ್ಸಿನಲ್ಲೂ ರೈತರ ಪರವಾಗಿ ಹೋರಾಡುವ ಶಕ್ತಿ ನನಗಿದೆ. ಬಿಡದಿಯ ಕಿಂಚಿತ್ತೂ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಬಿಡುವುದಿಲ್ಲ. ಆಗಸ್ಟ್ 19ರಂದು ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಬೃಹತ್ ಸಭೆ ಕರೆಯಲಾಗಿದೆ. ರೈತರು ಮಾನಸಿಕವಾಗಿ ಹೋರಾಟಕ್ಕೆ ಸಿದ್ಧರಾಗಬೇಕೆಂದು ಎಚ್.ಡಿ ದೇವೇಗೌಡ ಅವರು ಕರೆ ನೀಡಿದರು. ಒಕ್ಕಲಿಗರು ಸಿಎಂ ಆದರೆ ದೇವೇಗೌಡರ ಪುಟ 2ಕ್ಕೆ

ಮೊದಲ ಪುಟದಿಂದ

## ನಾಗೇಂದ್ರಗೆ ಹೈಕೋರ್ಟ್ ರಿಲೀಫ್

ನಾಗೇಂದ್ರ ಅವರಿಗೆ ಜಾಮೀನು ನೀಡುವಾಗ ಕರ್ನಾಟಕ ರಾಜ್ಯದಿಂದ ಹೊರಗೆ ಪ್ರಯಾಣಿಸಬೇಕಾದರೆ ನ್ಯಾಯಾಲಯದಿಂದ ಲಿಖಿತ ಅನುಮತಿ ಪಡೆಯುವುದು ಕಡ್ಡಾಯ ಎಂಬ ಸ್ಪಷ್ಟ ಷರತ್ತು ವಿಧಿಸಿತ್ತು. ಈ ಷರತ್ತನ್ನು ಮಾರ್ಪಡಿಸಿ ಅನುಮತಿಯಿಲ್ಲದೆ ದೇಶ ಬಿಟ್ಟು ತೆರಳುವಂತಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ. ಪ್ರಕರಣದಲ್ಲಿ ಆಕ್ಷೇಪಣೆ ಸಲ್ಲಿಸಲು ಜಾರಿ ನಿರ್ದೇಶನಾಲಯಕ್ಕೆ ಆಗಸ್ಟ್ 12ರವರೆಗೆ ಕಾಲಾವಕಾಶ ನೀಡಿದೆ. ಜುಲೈನಲ್ಲಿ ದೆಹಲಿಗೆ ತೆರಳಲು ಅನುಮತಿ ನೀಡುವಂತೆ ಕೋರಿ ನಾಗೇಂದ್ರ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಆದರೆ ನ್ಯಾಯಾಲಯ ಈ ಅರ್ಜಿಯನ್ನು ತಿರಸ್ಕರಿಸಿತ್ತು. ಈ ಆದೇಶವನ್ನು ನಾಗೇಂದ್ರ ಅವರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಸಚಿವನಾಗಿರುವ ಕಾರಣ ದೆಹಲಿ ಸೇರಿದಂತೆ ಹಲವು ರಾಜ್ಯಗಳಿಗೆ ತೆರಳಬೇಕಾಗುತ್ತದೆ. ಹೀಗಾಗಿ ಆದೇಶವನ್ನು ಮಾರ್ಪಡಿಸಬೇಕೆಂದು ಕೋರಿ ಮನವಿ ಸಲ್ಲಿಸಿದ್ದರು. ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಸೇರಿದ ನೂರಾರು ಕೋಟಿ ರೂಪಾಯಿ ಹಣವನ್ನು ಅಕ್ರಮವಾಗಿ ವಿವಿಧ ಖಾಸಗಿ ಖಾತೆಗಳಿಗೆ ವರ್ಗಾಯಿಸಲಾಗಿದೆ ಎಂಬ ಹಗರಣ ಹಿನ್ನೆಲೆಯಲ್ಲಿ ಈ ಹಿಂದೆ ಸಚಿವರಾಗಿದ್ದ ಬಿ. ನಾಗೇಂದ್ರ ರಾಜೀನಾಮೆ ನೀಡಿದ್ದರು. ಜಾರಿ ನಿರ್ದೇಶನಾಲಯ ಬಂಧಿಸಿತ್ತು.

## ಶೀಘ್ರವೇ ಖಾತೆ ಹಂಚಿಕೆ ಪ್ರಕ್ರಿಯೆ

ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಹೇಳಿದರು. ಹೊಸದಾಗಿ ಸಚಿವರಾದವರು ಆರಂಭದಲ್ಲಿ ಕೆಲವು ತೊಂದರೆಗಳನ್ನು ಎದುರಿಸಬಹುದು. ಆದರೆ ಅವರಿಗೆ ತಿಳಿಸಲು ಅಧಿಕಾರಿಗಳು ಇರುತ್ತಾರೆ. ಆನಂತರ ಅವರು ವಿಷಯಗಳನ್ನು ಕಲಿಯುತ್ತಾರೆ. ನಾವು ಹೊಸ ಸಚಿವರಾಗಿದ್ದಾಗ ನಾವು ಸಹ ಅದನ್ನು ಎದುರಿಸಿದ್ದೇವೆ ಎಂದು ಅವರು ಹೇಳಿದರು.

## 'ನೆಪಮಾತ್ರ'ಕ್ಕೆ ಬಿಡದಿ ಹೋರಾಟ!

ಪೋಸ್ಟ್ ಮಾಡಿದೆ. ಇದರೊಂದಿಗೆ ವಿಜಯೇಂದ್ರ ಅವರು ದೋಸ್ತಿಯಲ್ಲಿ ಎಲ್ಲವೂ ಸರಿ ಇಲ್ಲ ಎಂಬ ಸುಳಿವು ನೀಡಿದ್ದಾರೆ. ಹೀಗಿರುವಾಗ ಪಾಪದ ಪ್ರಾಯಶ್ಚಿತ ಪಾದಯಾತ್ರೆ ಯಾವ ಪುರುಷಾರ್ಥಕ್ಕೆ? ನಿಖಿಲ್ ಕುಮಾರಸ್ವಾಮಿ ರಾಜಕೀಯ ನೆಲೆಗಾಗಿಯೋ? ಕುಮಾರಸ್ವಾಮಿ ಅವರ ಬೇನಾಮಿ ಆಸ್ತಿ ರಕ್ಷಣೆಗೋ? ಎಂದು ಕಾಂಗ್ರೆಸ್ ಪ್ರಶ್ನಿಸಿದೆ. ಶಿಕಾರಿಪುರ ತಾಲ್ಲೂಕಿನ ಬರ ಪರಿಶೀಲನಾ ಸಭೆಗೂ ಮುನ್ನ ಸಚಿವ ಮಧು ಬಂಗಾರಪ್ಪ ಹಾಗೂ ವಿಜಯೇಂದ್ರ ನಡುವೆ ನಡೆದ ಮಾತುಕತೆ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಬಿಡದಿ ಟೌನ್ ಶಿಪ್ ಹೋರಾಟದ ವಿಚಾರವಾಗಿ ಉಭಯ ನಾಯಕರು ಪಿಸು ದನಿಯಲ್ಲಿ ಮಾತುಕತೆ ನಡೆಸಿದ್ದಾರೆ. ಮಧು ಬಂಗಾರಪ್ಪ ಅವರು ಇಂದು ಬಿಡದಿಯಲ್ಲಿ ನಿಮ್ಮದೇನೋ ಇರಬೇಕಲ್ವಾ? ಅದೇನೋ ಪಾದಯಾತ್ರೆ ಇಟ್ಟುಕೊಂಡಿದ್ದೀರಿ, ಹೋಗುತ್ತಿಲ್ಲವಾ? ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ವಿಜಯೇಂದ್ರ ಅವರು, ಮಾಡುತ್ತಿದ್ದಾರೆ. ಅದು ಸಿಂಬಾಲಿಕ್ ಮಾತ್ರ, ಹೋರಾಟಕ್ಕೆ ಬಂದಿರುವವರೇ ಪರಿಹಾರ ಪಡೆದುಕೊಳ್ಳುತ್ತಿದ್ದಾರೆ ಎಂದು ಹೇಳುತ್ತಾರೆ. ನಂತರ ಎಷ್ಟು ಪರ್ಸೆಂಟ್ ತೆಗೆದುಕೊಂಡಿದ್ದಾರೆ? ಎಂದು ಮಧು ಬಂಗಾರಪ್ಪ ಅವರು ಪ್ರಶ್ನಿಸುತ್ತಾರೆ, ನಾನು ಅದನ್ನು ಫಾಲೋ ಮಾಡಿಲ್ಲ. ಪರಿಹಾರ ಎಷ್ಟು ಪರ್ಸೆಂಟ್ ಪಡೆದುಕೊಂಡಿದ್ದಾರೆ ಗೊತ್ತಿಲ್ಲ. ಆದರೆ ಪರಿಹಾರ ಪಡೆದುಕೊಳ್ಳುತ್ತಿದ್ದಾರೆ ಎಂದು ಹೇಳುತ್ತಾರೆ.

## ನನ್ನ ಬುದ್ಧಿಗೆ ವಯಸ್ಸಾಗಿಲ್ಲ

ಕುಟುಂಬ ಸಹಿಸುವುದಿಲ್ಲ ಎಂಬ ಆರೋಪವನ್ನು ತಳ್ಳಿಹಾಕಿದ ಅವರು, ನಿಮಗೆ ಇನ್ನೂ ಎರಡು ವರ್ಷ ಅಧಿಕಾರವಿದೆ. ಉತ್ತಮ ಆಡಳಿತ ಮಾಡಿ, ನಮ್ಮದೇನೂ ತಕರಾರಿಲ್ಲ. ಯಾರು ಸಿಎಂ ಆಗಿ ಒಳ್ಳೆಯ ಕೆಲಸ ಮಾಡಿದರೂ ಬೆಂಬಲಿಸುತ್ತೇವೆ ಎಂದು ಹೇಳಿದರು.

## ರಾಜಕೀಯಕ್ಕಾಗಿ ಪಾದಯಾತ್ರೆ

ಹಂಚಿಕೆ ವಿಚಾರದಲ್ಲಿ ಇನ್ನು ಸೂಚನೆ ಏನು ಬಂದಿಲ್ಲ. ಈಗಾಗಲೇ ಕೈತುಂಬಾ ಕೆಲಸ ಕೊಟ್ಟಿದ್ದಾರೆ. ಬರ, ಅತಿವೃಷ್ಟಿ ಪರಿಶೀಲನೆ ಕೊಟ್ಟಿದ್ದಾರೆ. ಸಿಎಂ ವರಿಷ್ಠರನ್ನ ಭೇಟಿ ಮಾಡಿದ ನಂತರ ಖಾತೆ ಹಂಚಿಕೆ ಮಾಡ್ತಾರೆ ಎಂದು ಹೇಳಿದರು.

## ಸಿಕ್ಕಿಲ್ಲ ಹೈಕಮಾಂಡ್ 'ಗ್ರೀನ್ ಸಿಗ್ನಲ್'

ಎಚ್.ಸಿ ಬಾಲಕೃಷ್ಣ ಮತ್ತು ಬಿ ನಾಗೇಂದ್ರ ಅವರನ್ನು ಕೈಬಿಡುವ ಸಾಧ್ಯತೆಯ ಬಗ್ಗೆಯೂ ಚರ್ಚಿಸಿರುವ ಅವರು ಒಕ್ಕಲಿಗ ನಾಯಕ ವಿಜಯನಗರ ಶಾಸಕ ಎಂ.ಕೃಷ್ಣಪ್ಪ ಮತ್ತು ಬ್ಯಾಡಗಿ ಭಾಗದ ಕುರುಬ ಶಾಸಕ ಬಸವರಾಜ ಶಿವಣ್ಣನವರ್ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಿದ್ದಾರೆ. ವೇಣುಗೋಪಾಲ್ ಅವರೊಂದಿಗೆ ಚರ್ಚಿಸಿದ ನಂತರ ಈ ಬದಲಾವಣೆಗಳ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ತಿಳಿಸಿವೆ.

## ತಗ್ಗಿದ ಮುಂಗಾರು

ಮುನ್ಸೂಚನೆ ನೀಡಿದೆ. ಮುಂಗಾರಿನ ಪ್ರಮಾಣ ಕಡಿಮೆಯಾಗಿದೆ. ಉತ್ತರ ಒಳನಾಡು, ದಕ್ಷಿಣ ಒಳನಾಡು, ಮಲೆನಾಡು, ಕರಾವಳಿ ಭಾಗದ ಅಲ್ಲಲ್ಲಿ ಮಾತ್ರ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣವಿರಲಿದೆ.

## ನಾನೊಬ್ಬನೇ ಉತ್ತರಿಸುವೆ: ಡಿಕೆಶಿ

ಅಗತ್ಯಬಿದ್ದರೆ ಅಧಿವೇಶನದಲ್ಲಿ ವಿಪಕ್ಷಗಳ ಪ್ರಶ್ನೆಗೆ ಎಲ್ಲ ಖಾತೆಗಳ ಬಗ್ಗೆಯೂ ನಾನೊಬ್ಬನೇ ಉತ್ತರಿಸುತ್ತೇನೆ ಎಂದು ತಿಳಿಸಿದರು. ಖಾತೆ ಹಂಚಿಕೆ ವಿಳಂಬವಾಗುತ್ತಿರುವ ಕುರಿತು ಕೇಳಿದ ಪ್ರಶ್ನೆಗೆ, ದೆಹಲಿಯಲ್ಲಿ ನಾನು ಎಷ್ಟು ದಿನದಿಂದ ಇದ್ದೇನೆ. ಯಡಿಯೂರಪ್ಪನವರು ಸಿಎಂ ಆಗಿದ್ದಾಗ ಎಷ್ಟು ದಿನ ಇದ್ದರು ಎಂದು ಡಿಕೆಶಿ ಮರುಪ್ರಶ್ನಿಸಿದರು. ಈಗಾಗಲೇ ಸಚಿವರು ಮೂರು ದಿನಗಳ ಕಾಲ ಪ್ರವಾಸ ನಡೆಸಿ ಬರ ಪರಿಸ್ಥಿತಿ ಕುರಿತು ಅಧ್ಯಯನ ಮಾಡಿ ವರದಿ ನೀಡಿದ್ದಾರೆ. ಸಚಿವರು ಉತ್ತಮ ಕೆಲಸ ಮಾಡಿದ್ದಾರೆ ಎಂದು ಅವರು ಹೇಳಿದರು.

## ಅತೃಪ್ತರಿಗೆ ನಿಗಮ-ಮಂಡಳಿ ಸ್ಥಾನ

ಅತೃಪ್ತಿಯನ್ನು ಶಮನಗೊಳಿಸಲು ಕಾಂಗ್ರೆಸ್ ಹೈಕಮಾಂಡ್ ಸೀಮಿತ ಸಂಪುಟ ಪುನಾರಚನೆಗೆ ಮುಂದಾಗುತ್ತದೆಯೇ ಅಥವಾ ಈಗಾಗಲೇ ಘೋಷಿಸಿರುವ ಸಂಪುಟದ ಸಂಯೋಜನೆಯನ್ನೇ ಮುಂದುವರಿಸುತ್ತದೆಯೇ ಎಂಬುದು ಕುತೂಹಲ ಮೂಡಿಸಿದೆ. ಕೆಲವೇ ದಿನಗಳಲ್ಲಿ ವಿಧಾನಮಂಡಲದ ಮುಂಗಾರು ಅಧಿವೇಶನ ಆರಂಭವಾಗಲಿರುವ ಹಿನ್ನೆಲೆಯಲ್ಲಿ ಶಿವಕುಮಾರ್ ಅವರ ದೆಹಲಿ ಭೇಟಿ ನಿರ್ಣಾಯಕವಾಗಲಿದೆ.

# ಪುನರ್ಜೀವನ್, ಸುಧಾರಿತ ನರ ಪುನರ್ವಸತಿ ಘಟಕ ಪ್ರಾರಂಭ

ಮೈಸೂರು: ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಪುನರಜೀವನ್ (ಪುನರಜೀವನ್) ಹಾಗೂ ಸುಧಾರಿತ ನರ ಪುನರ್ವಸತಿ ಘಟಕವನ್ನು ರಾಜವಂಶಸ್ಥೆ ತ್ರಿಶಿಕಾಕುಮಾರಿ ಚಾಲನೆ ನೀಡುವ ಮೂಲಕ ಪ್ರಾರಂಭಿಸಿದರು.

ಬಳಿಕ ವಿಕಲಚೇತನ ಮಕ್ಕಳೊಂದಿಗೆ ಸಂಭಾಷಣೆ ನಡೆಸುವ ಮೂಲಕ ಗಮನ ಸೆಳೆದರು. ಜತೆಗೆ ಘಟಕದಿಂದ ಮಕ್ಕಳಿಗಾಗುವ ಪ್ರಯೋಜನ ಕುರಿತು ಮಾಹಿತಿ ಕೇಳಿ ಪಡೆದುಕೊಂಡರು. ಇದು ಪಾರ್ಶ್ವವಾಯು, ಆಘಾತಕಾರಿ ಮಿದುಳಿನ ಗಾಯ, ಮೆದುಳು ಮತ್ತು ನರವೈಜ್ಞಾನಿಕ ಕ್ಯಾನ್ಸರ್‌ಗಳು, ಬುದ್ಧಿಮಾಂದ್ಯತೆ ಮತ್ತು ಇತರ ನರವೈಜ್ಞಾನಿಕ ಮತ್ತು ನರ ಕ್ಷೀಣಗೊಳ್ಳುವ ಪರಿಸ್ಥಿತಿಗಳಿಂದ ಪೀಡಿತ ವ್ಯಕ್ತಿಗಳಲ್ಲಿ ಕಾರ್ಯ, ಸ್ವಾತಂತ್ರ್ಯ ಮತ್ತು ಜೀವನದ ಗುಣಮಟ್ಟವನ್ನು ಪುನಃಸ್ಥಾಪಿಸುವ ಗುರಿಯನ್ನು ಹೊಂದಿರುವ ಅತ್ಯಾಧುನಿಕ, ತಂತ್ರಜ್ಞಾನ-ಸಕ್ರಿಯಗೊಳಿಸಿದ ನರ ಪುನರ್ವಸತಿ ಘಟಕವಾಗಿದೆ. ಪುನರಜೀವನ್ ಅನ್ನು ಭಾರತದಲ್ಲಿ ಮೊದಲ ಬಾರಿಗೆ ಸಂಯೋಜಿತ ತಂತ್ರಜ್ಞಾನ-ಸಕ್ರಿಯಗೊಳಿಸಿದ ನರ ಪುನರ್ವಸತಿ ಸೌಲಭ್ಯವಾಗಿ ಕಲ್ಪಿಸಲಾಗಿದೆ, ಇದು ಸಾರ್ವಜನಿಕರಿಗೆ ಅಂತಹ ವಿಶೇಷ ಸೇವೆಗಳನ್ನು



ಪ್ರವೇಶಿಸಬಹುದಾದ, ಕೈಗೆಟುಕುವಂತೆ ಮಾಡುತ್ತದೆ.

ಜಾಗತಿಕವಾಗಿ 3 ಶತಕೋಟಿಗೂ ಹೆಚ್ಚು ಜನರು ನರವೈಜ್ಞಾನಿಕ ಸ್ಥಿತಿಯೊಂದಿಗೆ ಬದುಕುತ್ತಿದ್ದಾರೆಂದು ಅಂದಾಜಿಸಲಾಗಿದೆ.ಆದರೆ 2021ರಲ್ಲಿ ಪಾರ್ಶ್ವವಾಯು ಮಾತ್ರ ಸುಮಾರು 93.8 ಮಿಲಿಯನ್ ಪ್ರಚಲಿತ ಪ್ರಕರಣಗಳು ಮತ್ತು 11.9 ಮಿಲಿಯನ್ ಹೊಸ ಪ್ರಕರಣಗಳಿಗೆ ಕಾರಣವಾಗಿದೆ. ಬುದ್ಧಿಮಾಂದ್ಯತೆಯು ವಿಶ್ವಾದ್ಯಂತ 57 ಮಿಲಿಯನ್ಗಿಂತಲೂ ಹೆಚ್ಚು ಜನರ ಮೇಲೆ ಪರಿಣಾಮ ಬೀರುತ್ತದೆ, ಪ್ರತಿ ವರ್ಷ ಸುಮಾರು 10 ಮಿಲಿಯನ್ ಹೊಸ ಪ್ರಕರಣಗಳು ವರದಿಯಾಗುತ್ತವೆ. ಈ ಪರಿಸ್ಥಿತಿಗಳು ಆಗಾಗ್ಗೆ ಸಂವಹನ, ಅರಿವು, ಚಲನಶೀಲತೆ, ನುಂಗುವಿಕೆ, ಸಮತೋಲನ ಮತ್ತು ಸ್ವತಂತ್ರ ಜೀವನದ ಮೇಲೆ ಪರಿಣಾಮ ಬೀರುವ ದೀರ್ಘಕಾಲೀನ ತೊಂದರೆಗಳಿಗೆ ಕಾರಣವಾಗುತ್ತವೆ ಎಂದು ಕೇಂದ್ರ ಮಾಹಿತಿ ನೀಡಿದೆ.

ಪುನರ್ಜೀವನ್ ಅನ್ನು ಸಮಗ್ರ ಬಹುಶಿಸ್ತೀಯ ಮಾದರಿಯ ಮೂಲಕ ಈ ಸಂಕೀರ್ಣ ಪುನರ್ವಸತಿ ಅಗತ್ಯಗಳನ್ನು ಪರಿಹರಿಸಲು ವಿನ್ಯಾಸಗೊಳಿಸಲಾಗಿದೆ. ಇದು ಮುಂದುವರಿದ ಭಾಷಣ-ಭಾಷಾ ಚಿಕಿತ್ಸೆ, ಅರಿವಿನ-ಭಾಷಾ ಪುನರ್ವಸತಿ, ಭೌತಚಿಕಿತ್ಸೆ, ಔದ್ಯೋಗಿಕ ಚಿಕಿತ್ಸೆ ಮತ್ತು ತಂತ್ರಜ್ಞಾನ-ನೆರವಿನ ಪುನರ್ವಸತಿಯನ್ನು ಒಂದೇ ಸಮಗ್ರ ಸೌಲಭ್ಯದಡಿಯಲ್ಲಿ ತರುತ್ತದೆ ಎಂದರು.

ಸಾಂಪ್ರದಾಯಿಕ ಪುರಾವೆ ಆಧಾರಿತ ಚಿಕಿತ್ಸೆಯನ್ನು ಡಿಜಿಟಲ್ ಅರಿವಿನ-ಭಾಷಾ ಪುನರ್ವಸತಿ, ಟ್ರಾನ್ಸ್‌ಕ್ರೇನಿಯಲ್ ಡೈರೆಕ್ಟ್ ಕರೆಂಟ್ ಸ್ಟಿಮ್ಯುಲೇಶನ್ ಮತ್ತು ಸ್ಥಿರ ಚಿಕಿತ್ಸೆ ಅಪ್ಲಿಕೇಶನ್ನಂತಹ ಡಿಜಿಟಲ್ ಚಿಕಿತ್ಸಕ ಅನ್ವಯಿಕೆಗಳಿಂದ ವರ್ಧಿಸಲಾ ಗಿದೆ, ಇದು ರಚನಾತ್ಮಕ, ವೈಯಕ್ತಿಕಗೊಳಿಸಿದ ಮತ್ತು ತೀವ್ರ ಪುನರ್ವಸತಿಯನ್ನು ಸಕ್ರಿಯಗೊಳಿ ಸುತ್ತದೆ ಎಂದು ಮಾಹಿತಿ ನೀಡಿದೆ. ಕಾರ್ಯಕ್ರಮದಲ್ಲಿ ಆಯಿಷ್ನ ನಿರ್ದೇಶಕಿ ಡಾ.ಪುಷ್ಪಾವತಿ, ಡಾ.ಎಸ್.ಪಿ. ಗೋಸ್ವಾಮಿ, ಮತ್ತು ಹರ್ ಹೈನೆಸ್ ಪ್ರಿನ್ಸೆಸ್ ತ್ಸಾರಿಕಾ ಉದ್ಘಾಟನೆಯಲ್ಲಿ ಭಾಗವಹಿಸಿದ್ದರು.

# ಕಾರ್ಪೋರೇಟ್‌ಗಳೇ ಭಾರತ ಬಿಟ್ಟು ತೊಲಗಿ

## ಹೋರಾಟಗಾರರಿಂದ ರೈಲು ನಿಲ್ದಾಣ ಮುತ್ತಿಗೆಗೆ ಯತ್ನ, ಅರ್ಧ ದಾರಿಯಲ್ಲೇ ಪೊಲೀಸರಿಂದ ಬಂಧನ



ಮೈಸೂರು: ಕಾರ್ಪೋರೇಟ್‌ಗಳೇ ಭಾರತ ಬಿಟ್ಟು ತೊಲಗಿ ಬೃಹತ್ ಪ್ರತಿಭಟನೆ ನಡೆಸುತ್ತಾ ರೈಲು ತಡೆಗೆ ಮುಂದಾದ ಹೋರಾಟಗಾರರನ್ನು ಅರ್ಧ ರಸ್ತೆಯಲ್ಲೇ ಪೊಲೀಸರು ತಡೆದು ವಶಕ್ಕೆ ಪಡೆದು ಕರೆದೊಯ್ದ ಘಟನೆ ಸೋಮವಾರ ನಡೆಯಿತು.

ಸಂಯುಕ್ತ ಹೋರಾಟ ಕರ್ನಾಟಕ, ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿವತಿಯಿಂದ ಕ್ವಿಟ್ ಇಂಡಿಯಾ ಚಳುವಳಿಯ ನೆನಪಿನಲ್ಲಿ "ಕಾರ್ಪೋರೇಟ್‌ಗಳೇ ಭಾರತ ಬಿಟ್ಟು ತೊಲಗಿ" ಬೃಹತ್ ಮತ ಪ್ರದರ್ಶನ -ಜೈಲ್ ಭರೋ ಕಾರ್ಯಕ್ರಮದ ಭಾಗವಾಗಿ ನಗರದ ನಂಜರಾಜ ಬಹದ್ದೂರ್ ಛತ್ರದ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಪಾದಯಾತ್ರೆ ಮೂಲಕ ರೈಲು ನಿಲ್ದಾಣ ಮುತ್ತಿಗೆ ಹಾಕಲು ತೆರಳಿದರು. ಈ ವೇಳೆ ಪೊಲೀಸರು ದಾಸಪ್ಪ ವೃತ್ತದ ಬಳಿ ಬ್ಯಾರಿಕೇಡ್ ಗಳನ್ನು ಅಡ್ಡ ಹಾಕಿ ಪ್ರತಿಭಟನಾರರನ್ನು ತಡೆದು ಬಂಧಿಸಿ ನಂತರ ಬಿಡುಗಡೆ ಮಾಡಿದರು. ಇದೇ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಬಲವಂತ ಹಾಗೂ ಅನ್ಯಾಯದ ಭೂ ಸ್ವಾಧೀನ-ಕಾರ್ಪೊರೇಟ್ ಭೂ ಕಬಳಿಕೆ, ಕಾರ್ಮಿಕ ವಿರೋಧಿ ಕನಿಷ್ಠ ಕೂಲಿ ಪರಿಷ್ಕರಣೆ ವಿರೋಧಿಸಿ, 4 ಕಾರ್ಮಿಕ ಸಂಹಿತೆಗಳನ್ನು ವಾಪಾಸ್ ಪಡೆಯಬೇಕೆಂದು ಒತ್ತಾಯಿಸಿದರು.

ವಿಜಿ ಗ್ರಾಮ್ ಜಿ ಕಾಯ್ದೆ, ವಿದ್ಯುತ್ ತಿದ್ದುಪಡಿ ಕಾಯ್ದೆ 2025 ಬೀಜ ಕಾಯ್ದೆ, ಕೃಷಿ ಮಾರುಕಟ್ಟೆ ಕುರಿತ ರಾಷ್ಟ್ರೀಯ ಧೋರಣಾ ಚೌಕಟ್ಟು ಹಾಗೂ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸುವಂತೆ ಆಗ್ರಹಿಸಿದರು. ಎಂ.ಎಸ್ ಸ್ವಾಮಿನಾಥನ್ ಶಿಪಾರಸ್ಸಿನಂತೆ ರೈತರ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಶಾಸನ, ಎಲ್ಲಾ ರೈತ- ಕೃಷಿಕೂಲಿಕಾರ-ಮಹಿಳೆಯರ ಎಲ್ಲಾ ರೀತಿಯ ಸಾಲ ಮನ್ನಾ ಮಾಡಲು ಹಾಗೂ ಋಣ ಮುಕ್ತ ಕಾಯ್ದೆ ಜಾರಿಗೆ ಮತ್ತು ಶಾಸನಬದ್ಧ ಜೀವನಾವಶ್ಯಕ ಕನಿಷ್ಟ ಕೂಲಿ ಶಾಸನಕ್ಕೆ, ಶಾಸನಸಭೆಗಳಲ್ಲಿ ಮಹಿಳಾ ಮೀಸಲಾತಿ ಜಾರಿಗೊಳಿಸಬೇಕು. ಖಾಸಗೀಕರಣ, ರಸಗೊಬ್ಬರ, ಡೀಸೆಲ್ ಸೇರಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಮೇಲೆ ಹಾಗೂ ಎಲ್ಲಾ ವಲಯಗಳಲ್ಲಿ ಹೆಚ್ಚುತ್ತಿರುವ ಕಾರ್ಪೊರೇಟ್ ಶೋಷಣೆ ಮೇಲೆ ಸೂಕ್ತ ನಿಯಂತ್ರಣ ಹಾಕುವಂತೆ ಹಾಗೂ ಬ್ಯಾಂಕ್, ವಿಮೆ, ಆರೋಗ್ಯ, ಶಿಕ್ಷಣ ಖಾಸಗೀಕರಣ ನಿಲ್ಲಿಸುವಂತೆ ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಚಿಕ್ಕಣ್ಣೇಗೌಡ, ರಾಜ್ಯ ರೈತ ಸಂಘದ ಜಿಲ್ಲಾ ಅಧ್ಯಕ್ಷ ಹೊಸೂರು ಕುಮಾರ್, ಕಾರ್ಯದರ್ಶಿ ಪಿ.ಮರಂಕಯ್ಯ, ಹೊಸಕೋಟೆ ಬಸವರಾಜ್, ಸಿಐಟಿಯು ಜಿಲ್ಲಾಧ್ಯಕ್ಷ ಅಣ್ಣಪ್ಪ, ಕಾರ್ಯದರ್ಶಿ ಬಾಲಾಜಿರಾವ್, ಜಿ.ಜಯರಾಂ, ಬಸವಯ್ಯ, ಎಐಟಿಸಿ ಜಿಲ್ಲಾ ಉಪಾಧ್ಯಕ್ಷ ರಾಮಕೃಷ್ಣ, ಜಗನ್ನಾಥ್, ಅಂಗನವಾಡಿ ಸಂಘಟನೆಯ ಪುಷ್ಪ ಲತಾ, ಲೀಲಾವತಿ, ಜನವಾದಿ ಸಂಘಟನೆಯ ಶಕುಂತಲ ಕರ್ನಾಟಕ ರೈತ ಸಂಘದ ಕಂದೇಗಾಲ ಶ್ರೀನಿವಾಸ್, ಶಿವಕುಮಾರ್, ಐಲರ್ ಸಂಘಟನೆಯ ಚೌಡಳ್ಳಿ ಜವರಯ್ಯ, ಎಐಕೆಕೆಎಂಎಸ್‌ನ ಬಸವರಾಜ್, ಎಐಸಿಸಿಟಿಯು ಸಂಘಟನೆಯ ಚಂದ್ರಶೇಖರ್ ಮೇಟಿ, ದಲಿತ ಸಂಘರ್ಷ ಸಮಿತಿಯ ಶಂಭುಲಿಂಗ ಸ್ವಾಮಿ, ಪುಟ್ಟರಾಜು,ಚಂದ್ರಶೇಖರ್, ಸಣ್ಣ ನಾಯಕ, ಮಹೇಶ್, ಉಮೇಶ್,ಬೆಂಕಿಪುರ ಚಿಕ್ಕಣ್ಣ ಹಲವರು ಭಾಗವಹಿಸಿದ್ದರು.

## ರಾಮನಗರದಲ್ಲೂ ಚಳವಳಿ ಕಿಚ್ಚು



ರಾಮನಗರ: ಕ್ವಿಟ್ ಇಂಡಿಯಾ ಚಳವಳಿಯ 84ನೇ ವರ್ಷದ ನೆನಪಿನಲ್ಲಿ ರೈತರು ನಗರದಲ್ಲಿ ಕಾರ್ಪೋರೇಟ್‌ಗಳೇ ದೇಶ ಬಿಟ್ಟು ತೊಲಗಿ ಎಂದು ಪ್ರತಿಭಟಿಸಿದರು. ನಗರದ ಐಜೂರು ವೃತ್ತದಲ್ಲಿ ಸಂಯುಕ್ತ ಕರ್ನಾಟಕ ಸಂಘಟನೆಯ ಕರೆಯ ಮೇರೆಗೆ ರೈತರು ಜಮಾಯಿಸಿ ಬೆಂಗಳೂರು ಮೈಸೂರು ರಸ್ತೆ ತಡೆ ನಡೆಸಿದರು. ಬಲವಂತದ ಭೂಸ್ವಾಧೀನ ಕೂಡದು, ಕಾರ್ಮಿಕರ ವೇತನ ಪರಿಷ್ಕರಣೆಯಾಗಬೇಕು. ಕಾರ್ಮಿಕ ಸಂಹಿತೆ ರದ್ದಾಗಬೇಕು ಎಂದು ಆಗ್ರಹಿಸಿ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ವಿರೋಧಿಸಿ ರೈತರು ಪ್ರತಿಭಟಿಸಿದರು.

ಈ ವೇಳೆ ಮಾತನಾಡಿದ ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಮಲ್ಲಯ್ಯ ಮಾತನಾಡಿ, 1942ರಲ್ಲಿ ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ಎಂದು ಚಳವಳಿ ನಡೆದಿತ್ತು. ಇಂದು 2026ರಲ್ಲಿ ಕಾರ್ಪೋರೇಟ್ ಕಂಪನಿಗಳು ರೈತರ ಭೂಮಿಯನ್ನು ಕಾರ್ಮಿಕರ ಹಕ್ಕನ್ನು ಕಸಿದುಕೊಳ್ಳುತ್ತಿವೆ. ಈ ದೇಶ ವನ್ನು ಲೂಟಿ ಹೊಡೆಯುತ್ತಿವೆ. ಹೀಗಾಗಿಯೇ ಕ್ವಿಟ್ ಇಂಡಿಯ ಚಳವಳಿಯ ಈ ದಿನ ಕಾರ್ಪೋರೇಟ್ ಗಳೇ ದೇಶ ಬಿಟ್ಟು ತೊಲಗಿ ಎಂಬ ಚಳವಳಿ ನಡೆಸುತ್ತಿದ್ದೇವೆ ಎಂದರು.

ಕೈಗಾರಿಕಾ ಕಾರಿಡಾರ್‌ಗಳನ್ನು ನಿರ್ಮಿಸುವ ನೆಪದಲ್ಲಿ ರಾಜ್ಯ ಸರ್ಕಾರ ಬಲವಂತವಾಗಿ ಭೂಸ್ವಾಧೀನ ಮಾಡಿಕೊಳ್ಳುತ್ತಿದೆ. ಕಾರ್ಮಿಕರ ವೇತನ ವನ್ನು ಪರಿಷ್ಕರಿಸಲಿಲ್ಲ. ಗ್ರಾಮ್ ಜಿ ಕಾಯ್ದೆಯನ್ನು ಜಾರಿಗೆ ತರಲು ಈ ಸರ್ಕಾರ ಹೊರಟಿದೆ ಎಂದರು. .


ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡ ಕುಮಾರಸ್ವಾಮಿ ಮಾತನಾಡಿ ರಾಮನಗರ ರೇಷ್ಮೆ ನಗರ. ಇಲ್ಲಿ ರೈತನೇ ರಾಜ. ಆದರೆ ಇಂದು ರೈತನ ಶ್ರಮಕ್ಕೆ ಬೆಲೆ ಇಲ್ಲ, ಗೌರವ ಇಲ್ಲ. ಗೊಬ್ಬರದ ಬೆಲೆ ದುಪ್ಪಟ್ಟಾಗಿದೆ. ಇಂದು ಐಜೂರು ವೃತ್ತದಲ್ಲಿ ನಡೆಯುತ್ತಿರುವ ಹೋರಾಟ ಸರ್ಕಾರಗಳ ಕಣ್ಣು ತೆರೆಸಲು, ನಮ್ಮ ಧ್ವನಿ ದೆಹಲಿ, ಬೆಂಗಳೂರು ತಲುಪಬೇಕು ಎಂದರು.

ರೈತ ಸಂಘದ ಸಂಚಾಲಕ ಚೀಲೂರು ಮುನಿ ರಾಜು ಮಾತನಾಡಿ, ಇದು ಯಾವುದೇ ಪಕ್ಷದ ಹೋರಾಟ ಅಲ್ಲ. ಇದು ರೈತ-ಕಾರ್ಮಿಕರ ಅಸ್ತಿತ್ವದ ಹೋರಾಟ. ಇಂದು ಮೈಸೂರಿನಲ್ಲಿ, ಬೆಂಗಳೂರಿ ನಲ್ಲಿ, ರಾಮನಗರದಲ್ಲಿ ಒಂದೇ ಸಮಯದಲ್ಲಿ ನಾವು ರಸ್ತೆಗಿಳಿದಿದ್ದೇವೆ. ಸರ್ಕಾರ ನಮ್ಮ ಮಾತು ಕೇಳದಿದ್ದರೆ ಮುಂದಿನ ದಿನಗಳಲ್ಲಿ ರೈಲು ತಡೆ, ಜಿಲ್ಲಾಧಿಕಾರಿ ಕಚೇರಿ ಮುತ್ತಿಗೆ ನಡೆಯುತ್ತದೆ ಎಂದರು. ಪ್ರಮುಖರಾದ ರಮ್ಯಾ ರಾಮಣ್ಣ, ಕೃಷ್ಣಯ್ಯ, ನಾಗರಾಜು, ಪುಟ್ಟಸ್ವಾಮಿ, ರತ್ನಮ್ಮ, ವಿಜಯಕುಮಾರ್, ವೆಂಕಟೇಶ್, ರವಿ, ಗಣೇಶ್, ಹುಚಯ್ಯ, ತೇಜಸ್ವೀ, ಬಾಲರಾಜು, ರಾಜೇಂದ್ರ ಭಾಗವಹಿಸಿದರು.

# ಚಿನ್ನತಂಬಿ ಪ್ರಕರಣ ಎಸ್ಐಟಿ ರಚನೆಗೆ ಒತ್ತಾಯ

ಮೈಸೂರು: 'ಗ್ರಾಹಕರಿಂದ ಪಡೆದ ಚಿನ್ನಾಭರಣಗಳನ್ನು ಕರಗಿಸಿ ದುರುಪಯೋಗಪಡಿಸಿಕೊಂಡು ಮೋಸ ಎಸಗಿದ ಆರೋಪ ಎದುರಿಸುತ್ತಿರುವ 'ಡಿಜಿಎಫ್ ಗೋಲ್ಡ್ ಆಂಡ್ ಡೈಮಂಡ್' ಮಾಲೀಕ ಸೌಂದರ್‌ರಾಜ್ ಅಲಿಯಾಸ್ ಚಿನ್ನತಂಬಿ ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಪ್ರಕರಣದ ತನಿಖೆಗೆ ಎಸ್‌ಐಟಿ ರಚಿಸಬೇಕು' ಎಂದು ಶಾಸಕ ಟಿ.ಎಸ್. ಶ್ರೀವತ್ಸ ಒತ್ತಾಯಿಸಿದರು.

ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಮೋಸಕ್ಕೆ ಒಳಗಾದವರು ನೀಡಿದ ದೂರಿನ ಅನ್ವಯ ಚಿನ್ನತಂಬಿ ಮತ್ತು ಸಹಚರರನ್ನು ಪೊಲೀಸರು ಬಂಧಿಸಿದ್ದರು. ಬಳಿಕ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಅವರಿಗೆ ಜಾಮೀನು ಸಿಕ್ಕಿ ಬಿಡುಗಡೆ ಆಗಿದ್ದಾರೆ. ಇದು ದೂರುದಾರರ ಆಕ್ರೋಶಕ್ಕೆ ಕಾರಣವಾಗಿದೆ. ಮೋಸ ಹೋದ 75 ಮಂದಿ ನನ್ನ ಬಳಿ ಅರ್ಜಿ ಸಲ್ಲಿಸಿದ್ದರು. ಅವರಿಗೆ ಕಾನೂನು ಪ್ರಕಾರ ನ್ಯಾಯ



ಕೊಡಿಸಲೆಂದು ಹೋರಾಟ ನಡೆಸಿದ್ದೆ. ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ, ಈಗಾಗಲೇ ಚಿನ್ನತಂಬಿಯ ಆಸ್ತಿಯನ್ನು ಗುರುತಿಸಿ, ಮೈಸೂರು ಉಪವಿಭಾಗಾಧಿಕಾರಿಯನ್ನು ಸಕ್ಷಮ ಪ್ರಾಧಿಕಾರ ಎಂದು ನೇಮಿಸಲಾಗಿದೆ. 'ಚಿನ್ನತಂಬಿ ನಂಬಿ ಚಿನ್ನ ಕಳೆದುಕೊಂಡು ನಷ್ಟ ಅನುಭವಿಸಿದವರು ಹತಾಶರಾಗಿದ್ದಾರೆ. ಪೊಲೀಸರು, ರಾಜಕಾರಣಿಗಳು ನಮಗೆ ಸಹಾಯ ಮಾಡುತ್ತಿಲ್ಲ ಎಂಬ ಆತಂಕ ಹಾಗೂ ಅನುಮಾನ ಅವರಿಗಿದೆ. ಈ ಕಾರಣದಿಂದಲೇ ನಗರದಲ್ಲಿ ಚಿನ್ನತಂಬಿ ಒಡೆತನದ ಹೋಟೆಲ್ ಮೇಲೆ ಈಚೆಗೆ ದಾಳಿ ನಡೆಸಿದ್ದಾರೆ. ಹೀಗೆ, ಯಾರೂ ಕಾನೂನು ಕೈಗೆ ತೆಗೆದುಕೊಳ್ಳಬಾರದು. ಇದರಿಂದ ನಷ್ಟವನ್ನು ಭರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಮತ್ತೆ ಪ್ರಕರಣಗಳನ್ನು ಎದುರಿಸಬೇಕಾಗುತ್ತದೆ. ಪ್ರಕರಣವೀಗ ನ್ಯಾಯಾಲಯದಲ್ಲಿದೆ. ಹೀಗಾಗಿ, ನ್ಯಾಯಾಲಯದಿಂದ ನ್ಯಾಯ ಸಿಗುವವರೆಗೂ ದೂರುದಾರರು ಕಾಯಬೇಕಾಗುತ್ತದೆ' ಎಂದು ಕೋರಿದರು.

ಈ ವಂಚನೆ ಪ್ರಕರಣದ ಬಗ್ಗೆ ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿ ಪ್ರಸ್ತಾಪಿಸಿ ಸರ್ಕಾರದ ಗಮನಸೆಳೆಯುತ್ತೇನೆ. 400ಕ್ಕೂ ಹೆಚ್ಚು ಮಂದಿ ಪೊಲೀಸರಿಗೆ ದೂರು ನೀಡಿದ್ದಾರೆ. ಅವರಿಗೆ, ನ್ಯಾಯ ದೊರೆಯುತ್ತದೆ ಎಂಬ ನಂಬಿಕೆ ಬರುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಪ್ರಕರಣದಲ್ಲಿ ಏನೆಲ್ಲಾ ಪ್ರಕ್ರಿಯೆಗಳು ನಡೆಯುತ್ತಿವೆ ಎಂಬುದನ್ನು ಬಹಿರಂಗಪಡಿಸಬೇಕು' ಎಂದು ಒತ್ತಾಯಿಸಿದರು. 'ದೂರುದಾರರು ಆತಂಕಕ್ಕೆ ಒಳಗಾಗದೇ ಕಾಯಬೇಕು' ಎಂದು ಕೋರಿದರು.

'600 ಕೆ.ಜಿ.ಯಷ್ಟು ಚಿನ್ನದ ವ್ಯವಹಾರ ನಡೆದಿದೆ ಎಂಬ ಮಾಹಿತಿ ಇದೆ. ಈ ಬಗ್ಗೆ ದೂರು ಸಲ್ಲಿಸಲಾಗಿದೆ. ಆ ಚಿನ್ನ ಎಲ್ಲಿ ಹೋಯಿತು, ಮಧ್ಯವರ್ತಿಗಳು ಯಾರು, ಎಲ್ಲೆಲ್ಲಿ ವಹಿವಾಟು ನಡೆದಿದೆ ಎಂಬುದನ್ನು ಪತ್ತೆ ಹಚ್ಚುವಂತೆ ದೂರಿನಲ್ಲಿ ಕೇಳಲಾಗಿದೆ. ಕುವೆಂಪುನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಇಷ್ಟೆಲ್ಲ ಮೋಸ ನಡೆದಿದ್ದರೂ, ಈವರೆಗೂ ಒಬ್ಬ ಪೊಲೀಸರ ವಿರುದ್ಧವೂ ಯಾವುದೇ ಕ್ರಮ ಕೈಗೊಂಡಿಲ್ಲ. ಇದರ ಹಿಂದೆ ದೊಡ್ಡ ಷಡ್ಯಂತ್ರವೇ ನಡೆದಿದೆ. ಹೀಗಾಗಿ, ತನಿಖೆಗೆ ಎಸ್‌ಐಟಿ ರಚನೆ ಮಾಡಬೇಕು' ಎಂದು ಒತ್ತಾಯಿಸಿದರು. ಈ ಬಗ್ಗೆ, ಅಧಿವೇಶನದಲ್ಲೇ ಸರ್ಕಾರದ ಗಮನಸೆಳೆಯಲಾಗುವುದು' ಎಂದು ತಿಳಿಸಿದರು.

# ಟೌನ್‌ಶಿಪ್ ವಿರೋಧಿಸಿ ಪಾದಯಾತ್ರೆ: ಎರಡನೇ ದಿನಕ್ಕೆ ಮುಕ್ತಾಯ

## ಬೆಂಗಳೂರು ನಗರ ಪ್ರವೇಶಿಸಲು ಪೊಲೀಸರಿಂದ ತಡೆ | ಆ.18ರಂದು ಫ್ರೀಡಂ ಪಾರ್ಕಿನಲ್ಲಿ ಹೋರಾಟ | ಪಾದಯಾತ್ರೆ ಮುಕ್ತಾಯ: ನಿಖಿಲ್ ಘೋಷಣೆ

ರಾಮನಗರ: ಬಿಡದಿ ಹೋಬಳಿಯಲ್ಲಿ ಸಮಗ್ರ ನಗರ ಯೋಜನೆಯನ್ನು ವಿರೋಧಿಸಿ ಜೆಡಿಎಸ್ ನೇತೃತ್ವದಲ್ಲಿ ಬೈರಮಂಗಲ ದಿಂದ ಬೆಂಗಳೂರಿಗೆ ಮೂರು ದಿನಗಳ ಪಾದಯಾತ್ರೆ ಎರಡನೇ ದಿನಕ್ಕೆ ಮುಕ್ತಾಯವಾಗಿದೆ. ಆಗಸ್ಟ್ 18ರಂದು ಬೆಂಗಳೂರು ಫ್ರೀಡಂ ಪಾರ್ಕಿನಲ್ಲಿ ಮಾಜಿ ಪ್ರಧಾನಿ ದೇವೇಗೌಡರ ನೇತೃತ್ವದಲ್ಲಿ ಬೃಹತ್ ಹೋರಾಟ ಮುಂದುವರೆಯಲಿದೆ ಎಂದು ಜೆಡಿಎಸ್ ತಿಳಿಸಿದೆ.

### 2ನೇ ದಿನಕ್ಕೆ ಮುಕ್ತಾಯ, ನಿಖಿಲ್ ಘೋಷಣೆ

ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆ ಮತ್ತು ಬೆಂಗಳೂರು ನಗರ ಜಿಲ್ಲೆಯ ಗಡಿ ಭಾಗಕ್ಕೆ ಸೋಮವಾರ ಪಾದಯಾತ್ರೆ ತಲುಪಿತ್ತು. ಆದರೆ ಕಣಿಮಿಣಿಕೆ ಬಳಿ ಪೊಲೀಸರು ಪಾದಯಾತ್ರೆಯನ್ನು ತಡೆದರು. ಬೆಂಗಳೂರು ನಗರವನ್ನು ಪ್ರವೇಶಿಸಲು ಅವಕಾಶ ನೀಡಲಿಲ್ಲ. ಬೆಂಗಳೂರು ದಕ್ಷಿಣ ಜಿಲ್ಲೆ ಪೋಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸಗೌಡರವರು ಮನವೊಲಿಕೆಗೂ ನಾಯಕರು ಬಗ್ಗಲಿಲ್ಲ. ಈ ವೇಳೆ ನಿಖಿಲ್ ಕುಮಾರ ಸ್ವಾಮಿ, ಎ. ಮಂಜುನಾಥ್ ಮತ್ತಿತರರು ಪ್ರತಿರೋಧ ತೋರಿದರು.

ಈ ಮಧ್ಯೆ ಪಾದಯಾತ್ರೆಯ ಪೈಕಿ ಪ್ರಮುಖರನ್ನು ವಶಕ್ಕೆ ಪಡೆಯಲು ಪೊಲೀಸರು ಮುಂದಾದರು. ಆಗ



ನೂಕಾಟ ತಳ್ಳಟ ನಡೆಯಿತು.. ಪೊಲೀಸರ ಸರ್ಪಗಾವಲನ್ನು ಬೇಧಿಸಿದ ಕೆಲವು ನಾಯಕರು ಮತ್ತು ಕಾರ್ಯಕರ್ತರು ಬ್ಯಾರಿಕೇಡ್‌ಗಳನ್ನು ಪಕ್ಕಕ್ಕೆ ಸರಿಸಿ ಬೆಂಗಳೂರಿನತ್ತ ಹೆಜ್ಜೆ ಹಾಕಿದರು. ಕಣಿಮಿಣಿಕೆ ಸಮೀಪದ ಸಿರಿ ಕನ್ವೆನ್ಷನ್ ಹಾಲ್ ಬಳಿ ಸರ್ವಿಸ್ ರಸ್ತೆಗೆ ಪೊಲೀಸರು ವಾಹನಗಳನ್ನು ಅಡ್ಡಲಾಗಿ ನಿಲ್ಲಿಸಿದ್ದರು. ಅಲ್ಲಿ ಒಂದು ಸಾವಿರಕ್ಕೂ ಅಧಿಕ ಮಂದಿ ಪೊಲೀಸರು ನಿಯೋಜನೆಯಾಗಿದ್ದರು ಅಲ್ಲಿಯೂ ಪೊಲೀಸರು ತಡೆದಾಗ ಕಾರ್ಯಕರ್ತರು ಕೆಲಕಾಲ ಧರಣಿ ಕುಳಿತರು. ಕೊನೆಗೆ ನಿಖಿಲ್ ಕುಮಾರಸ್ವಾಮಿರವರು ಪಾದಯಾತ್ರೆಯನ್ನು ಮೊಟಕುಗೊಳಿಸುತ್ತಿರುವುದಾಗಿ ಘೋಷಣೆ ಮಾಡಿದರು. ಜೆಡಿಎಸ್ ಕಾರ್ಯಕರ್ತರು ಮತ್ತು ಪೊಲೀಸರ ನಡುವಿನ ತಳ್ಳಾಟ ನೂಕಾಟ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ ಗೌಡ ಅವರ ಎಡಗೈ ಬೆರಳಿಗೆ ಗಾಯವಾಗಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆ ದಿದ್ದಾರೆ ಎಂದು ಗೊತ್ತಾಗಿದೆ.

### ಆ.18ರಂದು ಫ್ರೀಡಂ ಪಾರ್ಕಿನಲ್ಲಿ ಹೋರಾಟ - ನಿಖಿಲ್

ಪೊಲೀಸರ ಈ ಹಠಾತ್ ಬೆಳವಣಿಗೆಯಿಂದ ಆಕ್ರೋಶಗೊಂಡ ಜೆಡಿಎಸ್ ನಾಯಕರು ಹಾಗೂ ಕಾರ್ಯಕರ್ತರು ತೀವ್ರ ಆಕ್ರೋಶ ವ್ಯಕ್ತಪಡಿಸಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಕೊನೆಗೆ ನಿಖಿಲ್ ಕುಮಾರಸ್ವಾಮಿರವರು ಆಗಸ್ಟ್ 18ರಂದು ಫ್ರೀಡಂ ಪಾರ್ಕಿನಲ್ಲಿ ಬೃಹತ್ ಹೋರಾಟ ನಡೆಸೋಣ, ಅಲ್ಲಿಗೆ ತಾವೆಲ್ಲರು ಆಗಮಿಸಬೇಕೆಂದು ಮನವಿ ಮಾಡಿ, ಪಾದಯಾತ್ರೆಯನ್ನು ಮೊಟಕುಗೊಳಿಸುತ್ತಿರುವುದಾಗಿ ಘೋಷಣೆ ಮಾಡಿದರು.

ಭಾನುವಾರ ಮೊದಲದಿನ ಪಾದಯಾತ್ರೆ ಬೈರಮಂಗಲದಲ್ಲಿ 517 ದಿನಗಳಿಂದ ನಡೆಯುತ್ತಿರುವ ಪ್ರತಿಭಟನಾ ಸ್ಥಳದಿಂದ ಆರಂಭವಾಗಿತ್ತು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ರಾಜ್ಯ ವಿಧಾನಸಭೆಯ ವಿರೋಧಪಕ್ಷದ ನಾಯಕ ಆರ್.ಅಶೋಕ್ ಚಾಲನೆ ನೀಡಿದ್ದರು. ಮೊದಲ ದಿನದ ಪಾದಯಾತ್ರೆ 8 ಕಮೀ ಕ್ರಮಿಸಿ ಬಿಡದಿ ಪಟ್ಟಣವನ್ನು ತಲುಪಿತ್ತು. ಸೋಮವಾರ ಬೆಳಿಗ್ಗೆ ಬಿಜಿಎಸ್ ಬಳಿ ಎರಡನೇ ದಿನದ ಪಾದಯಾತ್ರೆ ಆರಂಭವಾಯಿತು.

ಮಾಜಿ ಪ್ರಧಾನಿ ದೇವೇಗೌಡರು ಎರಡನೇ ದಿನದ ಪಾದಯಾತ್ರೆಗೆ ಚಾಲನೆ ನೀಡಿದ್ದರು. ಸೋಮವಾರ ಸಂಜೆ ಬೆಂಗಳೂರು ನೈಸ್ ಜಂಕ್ಷನ್ ಬಳಿಗೆ ತಲುಪಿ, ವಿಶ್ರಾಂತಿಗೆ ಅವಕಾಶವಿತ್ತು. ಆದರೆ ಪೊಲೀಸರು ಕಣಿಮಿಣಿಕೆ ಬಳಿಯೇ ಪಾದಯಾತ್ರಿಗಳನ್ನು ತಡೆದಿದ್ದಾರೆ. ಹೀಗಾಗಿ ಪಾದಯಾತ್ರೆಯನ್ನು ಮುಕ್ತಾಯಗೊಳಿಸಲಾಗಿದೆ

### ಹೈಕೋರ್ಟ್ ಸೂಚನೆ ಇದೆ

**ಪೊಲೀಸರು**

**ಹೈಕೋರ್ಟ್ ಸೂಚನೆಯಂತೆ ಫ್ರೀಡಂ ಪಾರ್ಕ್ ಹೊರತು ಪಡಿಸಿ, ಬೆಂಗಳೂರು ನಗರದ ಇತರೆ ಸ್ಥಳಗಳಲ್ಲಿ ಪ್ರತಿಭಟನೆಗೆ ಅವಕಾಶ ಇಲ್ಲವೆಂದು ಪೊಲೀಸ್ ಅಧಿಕಾರಿಗಳು ಜೆಡಿಎಸ್ ನಾಯಕರಿಗೆ ಮನವರಿಕೆ ಮಾಡಿಕೊಟ್ಟು ಪಾದಯಾತ್ರೆಗೆ ತಡೆದರು.**

ಕರ್ನಾಟಕ ಸರ್ಕಾರ

# ಭೂ ಗ್ಯಾರಂಟಿಯ ಭದ್ರತೆ

## ಜನಪರ ಆಡಳಿತವೇ ಆದ್ಯತೆ






- ರಾಜ್ಯದೆಲ್ಲೆಡೆ **'ಬಿ' ಖಾತಾದಿಂದ 'ಎ' ಖಾತಾ** ಪರಿವರ್ತನೆಗೆ ಕ್ರಮ
- **2,500 ಚದರ ಅಡಿ**ವರೆಗಿನ ನೂತನ ವಸತಿ ಕಟ್ಟಡಗಳ ಶಾಶ್ವತ **ವಿದ್ಯುತ್ ಸಂಪರ್ಕಕ್ಕೆ ಒಸಿ ವಿನಾಯಿತಿ**
- ಒಂದು ವರ್ಷದಲ್ಲಿ **1 ಕೋಟಿ ಕುಟುಂಬಗಳಿಗೆ ಇ-ಖಾತಾ ಹಂಚಿಕೆ**ಗೆ ನಿರ್ಣಯ
- ಕೇಂದ್ರ ಅರಣ್ಯ ಇಲಾಖೆಯಲ್ಲಿ ಬಾಕಿ ಇರುವ ರಾಜ್ಯದ ಎಲ್ಲಾ ಅರಣ್ಯ ಅನುಮತಿ ಪ್ರಕರಣಗಳ ಇತ್ಯರ್ಥ
- ಗಣಿಗಾರಿಕೆ ಸೇರಿ ವಿವಿಧ ಚಟುವಟಿಕೆಗಳಿಗೆ ಪಡೆದು ಬಳಸದೆ ಬಿಟ್ಟಿದ್ದ ಸರ್ಕಾರಿ ಜಾಗಗಳ ಸದ್ಬಳಕೆಗೆ ಕ್ರಮ
- ಬಡವರಿಗೆ ಬರೀ ನಿವೇಶನ ನೀಡುವ ಬದಲು ವಾಸಯೋಗ್ಯ ಮನೆಗಳನ್ನು ನಿರ್ಮಿಸಲು ತೀರ್ಮಾನ

**ಗ್ಯಾರಂಟಿ ಸರ್ಕಾರ**

ಶಕ್ತಿ ಅನ್ನಭಾಗ್ಯ ಗೃಹ ಜ್ಯೋತಿ ಗೃಹಲಕ್ಷ್ಮಿ ಯುವನಿಧಿ

CMofKarnataka https://dipr.karnataka.gov.in/

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕರ್ನಾಟಕ ವಾರ್ತೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಬ್ರಾಹ್ಮಣ ಸಮುದಾಯಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

ಸ್ಥಳ ಪರಿಶೀಲಿಸಿದ ಶಾಸಕ ಪಿ. ರವಿಕುಮಾರ್ ಗೌಡ ಗಣಿಗ; ಅತ್ಯಾಧುನಿಕ ಬೋಧನಾ ಕೊಠಡಿ, ವಿದ್ಯಾರ್ಥಿ ವಸತಿ ನಿಲಯ ನಿರ್ಮಾಣಕ್ಕೆ ಒತ್ತು

# ಮಿಮ್ಸ್ ಮೇಲ್ದರ್ಜೆಗೆ –50 ಕೋಟಿ: ಸುಸಜ್ಜಿತ ಕಟ್ಟಡಗಳ ನಿರ್ಮಾಣ

**ಮಂಡ್ಯ:** ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಮಿಮ್ಸ್) ಹಾಗೂ ಬೋಧಕ ಆಸ್ಪತ್ರೆಯನ್ನು ಮತ್ತಷ್ಟು ಮೇಲ್ದರ್ಜೆಗೇರಿಸಿ, ವೈದ್ಯಕೀಯ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ಸುಮಾರು ?50 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ಪಿ. ರವಿಕುಮಾರ್ ಗೌಡ ಗಣಿಗ ಅವರು ಜಿಲ್ಲಾಧಿಕಾರಿ ಡಾ. ಕುಮಾರ್ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದರು.

ಮಿಮ್ಸ್‌ನಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಗಣನೀಯವಾಗಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಲಭ್ಯವಿರುವ ಮೂಲಸೌಕರ್ಯಗಳನ್ನು ಮತ್ತಷ್ಟು ವಿಸ್ತರಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಆಧುನಿಕ ವೈದ್ಯಕೀಯ ಶಿಕ್ಷಣ ನೀಡಲು ಅಗತ್ಯವಿರುವ ಅತ್ಯಾಧುನಿಕ ಹಾಗೂ ಸುಸಜ್ಜಿತ ಬೋಧನಾ ಕೊಠಡಿಗಳು, ಶೈಕ್ಷಣಿಕ ಸೌಲಭ್ಯಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ವಿದ್ಯಾರ್ಥಿ ವಸತಿ ನಿಲಯ ನಿರ್ಮಿಸುವ ಕುರಿತು ಶಾಸಕರು ಅಧಿಕಾರಿಗಳು ಮತ್ತು ಎಂಜಿನಿಯರ್‌ಗಳೊಂದಿಗೆ ಸ್ಥಳದಲ್ಲಿಯೇ ಚರ್ಚಿಸಿದರು.

50 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿನ್ಯಾಸ, ಕಟ್ಟಡಗಳ ಸ್ಥಳಾವಕಾಶ, ವಿದ್ಯಾರ್ಥಿಗಳಿಗೆ ಅಗತ್ಯವಿರುವ ಸೌಲಭ್ಯಗಳು ಹಾಗೂ ಭವಿಷ್ಯದಲ್ಲಿ ಮಿಮ್ಸ್‌ನ ವಿಸ್ತರಣೆಗೆ ಬೇಕಾಗುವ ಮೂಲಸೌಕರ್ಯಗಳ ಕುರಿತು ಸಮಗ್ರವಾಗಿ ಪರಿಶೀಲಿಸಿದರು.

**ತುರ್ತಾಗಿ ನೀಲನಕ್ಷೆ ಸಿದ್ಧಪಡಿಸಲು ಸೂಚನೆ:** ತಿಮಿಮ್ಸ್ ಕೇವಲ ಮಂಡ್ಯ ಜಿಲ್ಲೆಗೆ ಸೀಮಿತವಾದ ವೈದ್ಯಕೀಯ ಸಂಸ್ಥೆಯಾಗದೆ ಸುತ್ತಮುತ್ತಲ ಜಿಲ್ಲೆಗಳ ಸಾವಿರಾರು ಜನರಿಗೆ ಆರೋಗ್ಯ ಸೇವೆ ಒದಗಿಸುವ ಪ್ರಮುಖ ಸಂಸ್ಥೆಯಾಗಿದೆ. ಹೀಗಾಗಿ ಹೊಸ ಕಟ್ಟಡಗಳ ನಿರ್ಮಾಣದಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಶಾಸಕ ಪಿ. ರವಿಕುಮಾರ್ ಗೌಡ ಗಣಿಗ ಸೂಚಿಸಿದರು.

ಯೋಜನೆಯ ಕಾಮಗಾರಿಯನ್ನು ಅನಗತ್ಯವಾಗಿ ವಿಳಂಬ



ಮಾಡಬಾರದು. ಭವಿಷ್ಯದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಕಟ್ಟಡಗಳ ವಿನ್ಯಾಸ ರೂಪಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಎಂಜಿನಿಯರ್‌ಗಳು ತುರ್ತಾಗಿ ಸಮಗ್ರ ನೀಲನಕ್ಷೆ ಸಿದ್ಧಪಡಿಸಿ, ಚರ್ಚೆಗೆ ಮಂಡಿಸಬೇಕು. ಯೋಜನೆ ಅನುಷ್ಠಾನಗೊಂಡ ಬಳಿಕ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಶೈಕ್ಷಣಿಕ ವಾತಾವರಣ ದೊರೆಯುವಂತೆ ಯೋಜನೆ ರೂಪಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

**ಮಂಡ್ಯಕ್ಕೆ ಸುಸಜ್ಜಿತ ಟ್ರಾಮಾ ಕೇರ್ ಸೆಂಟರ್:** ಇದೇ ಸಂದರ್ಭದಲ್ಲಿ ಡಿಎಚ್‌ಒ ಕಚೇರಿ ಆವರಣದಲ್ಲಿರುವ ಜಾಗವನ್ನು ಶಾಸಕರು ಪರಿಶೀಲಿಸಿದರು. ಮಂಡ್ಯ ನಗರ ಹಾಗೂ ಜಿಲ್ಲೆಯ ಜನರಿಗೆ ತುರ್ತು ಸಂದರ್ಭಗಳಲ್ಲಿ ಅತ್ಯಾಧುನಿಕ ವೈದ್ಯಕೀಯ ಸೇವೆಗಳನ್ನು ತ್ವರಿತವಾಗಿ ಒದಗಿಸಲು ಸುಸಜ್ಜಿತ ಟ್ರಾಮಾ ಕೇರ್ ಸೆಂಟರ್ ನಿರ್ಮಾಣದ ಅಗತ್ಯವನ್ನು ಅವರು ಪ್ರತಿಪಾದಿಸಿದರು.

ಬೆಂಗಳೂರು–ಮೈಸೂರು ಹೆದ್ದಾರಿ ಸೇರಿದಂತೆ ಜಿಲ್ಲೆಯ ಪ್ರಮುಖ ರಸ್ತೆಗಳಲ್ಲಿ ಸಂಭವಿಸುವ ಅಪಘಾತಗಳು ಹಾಗೂ ಇತರ ತುರ್ತು ವೈದ್ಯಕೀಯ ಸಂದರ್ಭಗಳಲ್ಲಿ ರೋಗಿಗಳಿಗೆ ತಕ್ಷಣವೇ ಅಗತ್ಯ ಚಿಕಿತ್ಸೆ ದೊರೆಯುವ ವ್ಯವಸ್ಥೆ ಕಲ್ಪಿಸುವುದು ಅತ್ಯಂತ ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಟ್ರಾಮಾ ಕೇರ್ ಸೆಂಟರ್ ನಿರ್ಮಾಣಕ್ಕೆ ಅಗತ್ಯವಿರುವ ಐದು ಎಕರೆ ಸೂಕ್ತ ಜಮೀನನ್ನು ಅತಿ ಶೀಘ್ರವಾಗಿ ಗುರುತಿಸುವಂತೆ ಜಿಲ್ಲಾಧಿಕಾರಿ ಡಾ. ಕುಮಾರ್ ಅವರ ಸಮ್ಮುಖದಲ್ಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಶಾಸಕರು ಸೂಚನೆ ನೀಡಿದರು.

**ರೋಗಿಗಳ ಅಹವಾಲು ಆಲಿಸಿದ ಶಾಸಕ:** ಸ್ಥಳ ಪರಿಶೀಲನೆಯ ಸಂದರ್ಭದಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಆಗಮಿಸಿದ್ದ ಸಾರ್ವಜನಿಕರು

**● ಮಂಡ್ಯದಲ್ಲಿ ಟ್ರಾಮಾ ಕೇರ್ ಸೆಂಟರ್ ಸ್ಥಾಪನೆಗೆ 5 ಎಕರೆ ಜಾಗ ಗುರುತಿಸಲು ಸೂಚನೆ**

ಹಾಗೂ ರೋಗಿಗಳ ಕುಂದುಕೊರತೆಗಳನ್ನೂ ಶಾಸಕ ಪಿ. ರವಿಕುಮಾರ್ ಗೌಡ ಗಣಿಗ ಆಲಿಸಿದರು. ಆಸ್ಪತ್ರೆಯಲ್ಲಿ ದೊರೆಯುತ್ತಿರುವ ಚಿಕಿತ್ಸೆ, ವೈದ್ಯರು ಮತ್ತು ಸಿಬ್ಬಂದಿಯ ಸ್ಪಂದನೆ ಹಾಗೂ ಮೂಲಭೂತ ಸೌಲಭ್ಯಗಳ ಕುರಿತು ಸಾರ್ವಜನಿಕರಿಂದ ಮಾಹಿತಿ ಪಡೆದುಕೊಂಡರು.

ಬಳಿಕ ಮಿಮ್ಸ್ ನಿರ್ದೇಶಕ ಡಾ. ನರಸಿಂಹಮೂರ್ತಿ ಅವರಿಗೆ ಹಲವು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದ ಶಾಸಕರು, ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುವ ಪ್ರತಿಯೊಬ್ಬ ರೋಗಿಗೂ ಗುಣಮಟ್ಟದ ವೈದ್ಯಕೀಯ ಸೇವೆ ದೊರೆಯಬೇಕು. ಸಾರ್ವಜನಿಕರಿಗೆ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸಬೇಕು. ಆಸ್ಪತ್ರೆಯಲ್ಲಿ ರೋಗಿಗಳು ಅನಗತ್ಯ ತೊಂದರೆ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗಬಾರದು ಎಂದು ತಿಳಿಸಿದರು.

**ವೈದ್ಯರು, ಸಿಬ್ಬಂದಿ ಸಮಯಪಾಲನೆ ಕಡ್ಡಾಯ:** ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ಕರ್ತವ್ಯಕ್ಕೆ ಸಮಯಕ್ಕೆ ಸರಿಯಾಗಿ ಹಾಜರಾಗುವುದನ್ನು ಕಡ್ಡಾಯಗೊಳಿಸಬೇಕು. ಕರ್ತವ್ಯಲೋಪ ಅಥವಾ ಸಮಯಪಾಲನೆ ಮಾಡದಿರುವ ಪ್ರಕರಣಗಳು ಕಂಡುಬಂದರೆ ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಚಿಕಿತ್ಸೆಗೆ ಬರುವ ರೋಗಿಗಳ ನಡುವೆ ಯಾವುದೇ ರೀತಿಯ ತಾರತಮ್ಯ ಮಾಡಬಾರದು. ಬಡವರು, ಗ್ರಾಮೀಣ ಪ್ರದೇಶದವರು ಸೇರಿದಂತೆ ಆಸ್ಪತ್ರೆಗೆ ಬರುವ ಪ್ರತಿಯೊಬ್ಬರಿಗೂ ಸಮಾನವಾಗಿ ಚಿಕಿತ್ಸೆ ಮತ್ತು ಗೌರವ ದೊರೆಯಬೇಕು. ವೈದ್ಯರು ಹಾಗೂ ಸಿಬ್ಬಂದಿ ರೋಗಿಗಳು ಮತ್ತು ಅವರ ಕುಟುಂಬದವರೊಂದಿಗೆ ಸೌಹಾರ್ದಯುತವಾಗಿ ನಡೆದುಕೊಳ್ಳಬೇಕು ಎಂದು ಹೇಳಿದರು.

ಆಸ್ಪತ್ರೆಗೆ ಬರುವ ಸಾರ್ವಜನಿಕರೊಂದಿಗೆ ಅನುಚಿತವಾಗಿ ವರ್ತಿಸುವುದನ್ನು ಯಾವುದೇ ಕಾರಣಕ್ಕೂ ಸಹಿಸಲಾಗುವುದಿಲ್ಲ. ವೈದ್ಯರಾಗಲಿ, ಸಿಬ್ಬಂದಿಯಾಗಲಿ ಕರ್ತವ್ಯಲೋಪ ಅಥವಾ ಅನುಚಿತ ವರ್ತನೆ ತೋರಿದರೆ ಅವರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಿ. ಇಂತಹ ಕ್ರಮದ ಸಂದರ್ಭದಲ್ಲಿ ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯಬೇಡಿ. ನಮಗೆ ಸಾರ್ವಜನಿಕರ ಆರೋಗ್ಯ ಮತ್ತು ಉತ್ತಮ ವೈದ್ಯಕೀಯ ಸೇವೆಯೇ ಮುಖ್ಯ. ಅದಕ್ಕೆ ಮೊದಲ ಆದ್ಯತೆ ನೀಡಬೇಕು ಎಂದು ಮಿಮ್ಸ್ ನಿರ್ದೇಶಕ ಡಾ. ನರಸಿಂಹಮೂರ್ತಿ ಅವರಿಗೆ ಶಾಸಕ ಪಿ. ರವಿಕುಮಾರ್ ಗೌಡ ಗಣಿಗ ಖಡಕ್ ಸೂಚನೆ ನೀಡಿದರು.

**ವೈದ್ಯಕೀಯ ಶಿಕ್ಷಣ–ಆರೋಗ್ಯ ಸೇವೆ ಎರಡಕ್ಕೂ ಒತ್ತು**

ಮಿಮ್ಸ್‌ನಲ್ಲಿ–50 ಕೋಟಿ ವೆಚ್ಚದಲ್ಲಿ ಹೊಸ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಉದ್ದೇಶವು ವೈದ್ಯಕೀಯ ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ವಾತಾವರಣ ಕಲ್ಪಿಸುವುದರ ಜೊತೆಗೆ ಬೋಧಕ ಆಸ್ಪತ್ರೆಯ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಮಹತ್ವ ಪಡೆದಿದೆ. ಇದರೊಂದಿಗೆ ಪ್ರತ್ಯೇಕ ಟ್ರಾಮಾ ಕೇರ್ ಸೆಂಟರ್ ಸ್ಥಾಪನೆಗೆ ಐದು ಎಕರೆ ಜಾಗ ಗುರುತಿಸುವಂತೆ ನೀಡಿರುವ ಸೂಚನೆಯು ಮಂಡ್ಯ ಜಿಲ್ಲೆಯ ತುರ್ತು ಆರೋಗ್ಯ ಸೇವಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶ ಹೊಂದಿದೆ.

ಈ ಸಂದರ್ಭದಲ್ಲಿ ಮಂಡ್ಯ ಜಿಲ್ಲಾಧಿಕಾರಿ ಡಾ. ಕುಮಾರ್, ಮಿಮ್ಸ್ ನಿರ್ದೇಶಕ ಡಾ. ನರಸಿಂಹಮೂರ್ತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ (ಡಿಎಚ್‌ಒ) ಡಾ. ಬೆಟ್ಟಸ್ವಾಮಿ ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳು, ಎಂಜಿನಿಯರ್‌ಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

# ಮಕ್ಕಳ ಸ್ವಚ್ಛತೆ, ವೈಯಕ್ತಿಕ ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು

## ಜಂತುಹುಳು ನಿವಾರಣಾ ಮಾತ್ರೆ ಸೇವನೆಯಿಂದ ಮಕ್ಕಳ ಆರೋಗ್ಯ ರಕ್ಷಣೆ: ಡಾ. ಕುಮಾರ್

**ಮಂಡ್ಯ:** ಮಕ್ಕಳು ಸ್ವಚ್ಛತೆ ಹಾಗೂ ವೈಯಕ್ತಿಕ ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಯುವಜನತೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಂಡು ಸಮಾಜಕ್ಕೆ ಉತ್ತಮ ಕೊಡುಗೆ ನೀಡುವತ್ತ ಗಮನಹರಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ. ಕುಮಾರ ರವರು ತಿಳಿಸಿದರು.

ನಗರದ ಪೊಲೀಸ್ ಕಾಲೋನಿ ಸರ್ಕಾರಿ ಮಾದರಿ ಪ್ರೌಢಶಾಲೆಯಲ್ಲಿ ನಡೆದ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನದ ಅಂಗವಾಗಿ ಆಲ್ಬೆಂಡಜೋಲ್ ಮಾತ್ರೆ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿವರ್ಷ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಸರ್ಕಾರದ ವತಿಯಿಂದ ರಾಜ್ಯದ್ಯಂತ ಉಚಿತವಾಗಿ ಜಂತುಹುಳು ನಿವಾರಣಾ ಮಾತ್ರೆಗಳನ್ನು ವಿತರಿಸಲಾಗುತ್ತಿದೆ. ಇದರ ಅಂಗವಾಗಿ ಮಂಡ್ಯ ಜಿಲ್ಲೆಯಲ್ಲಿ 1ರಿಂದ 19 ವರ್ಷದೊಳಗಿನ ಸುಮಾರು 3.52 ಲಕ್ಷ ಮಕ್ಕಳಿಗೆ ಆಲ್ಬೆಂಡಜೋಲ್ ಮಾತ್ರೆಗಳನ್ನು ವಿತರಿಸಲಾಗುತ್ತಿದೆ ಎಂದರು.

ಶಾಲೆಗಳಲ್ಲಿಯೇ ಮಕ್ಕಳಿಗೆ ಮಾತ್ರೆಗಳನ್ನು ಆರೋಗ್ಯ ಸಿಬ್ಬಂದಿ ಹಾಗೂ ಶಿಕ್ಷಕರ ಸಮ್ಮುಖದಲ್ಲಿ ಸೇವಿಸುವಂತೆ ಕ್ರಮವಹಿಸಬೇಕು. ಮಕ್ಕಳು ಆರೋಗ್ಯವಾಗಿದ್ದರೆ ಮಾತ್ರ ಉತ್ತಮವಾಗಿ



ವಿದ್ಯಾಭ್ಯಾಸ ಮಾಡಲು ಸಾಧ್ಯ. ಆದ್ದರಿಂದ ಮಕ್ಕಳ ಆರೋಗ್ಯದ ಬಗ್ಗೆ ಪೋಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಹೇಳಿದರು.

ಮಕ್ಕಳು ವೈಯಕ್ತಿಕ ಸ್ವಚ್ಛತೆ ಕಾಪಾಡಿಕೊಳ್ಳುವುದರ ಜೊತೆಗೆ ಊಟ ಮಾಡುವ ಮೊದಲು ಮತ್ತು ನಂತರ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಪೌಷ್ಟಿಕ ಆಹಾರದ ಕೊರತೆ ಸೇರಿದಂತೆ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಂತುಹುಳು ನಿವಾರಣಾ ಮಾತ್ರೆಗಳನ್ನು ವಿತರಿಸಲಾಗುತ್ತಿದೆ. ಜಿಲ್ಲೆಯ ಯಾವುದೇ ಮಗು ಮಾತ್ರೆ ಸೇವನೆಯಿಂದ ವಂಚಿತವಾಗದಂತೆ ಅಧಿಕಾರಿಗಳು ಹಾಗೂ ಶಿಕ್ಷಕರು ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಲ್ಯಾಣಾಧಿಕಾರಿ ಡಾ. ಬೆಟ್ಟಸ್ವಾಮಿ ರವರು ಮಾತನಾಡಿ ಮಕ್ಕಳಲ್ಲಿ ಜಂತುಹುಳು ಸೋಂಕು ನಿವಾರಿಸಿ, ಅವರ ಆರೋಗ್ಯ ಹಾಗೂ ಪೌಷ್ಟಿಕತೆ ಹೆಚ್ಚಿಸುವ ಉದ್ದೇಶದಿಂದ ಪ್ರತಿವರ್ಷ ಜಂತುಹುಳು ನಿವಾರಣಾ ದಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಪ್ರತಿ ಆರು ತಿಂಗಳಿಗೊಮ್ಮೆ ಜಂತುಹುಳು ನಿವಾರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಜಿಲ್ಲೆಯಾದ್ಯಂತ ಸುಮಾರು 3.52 ಲಕ್ಷ ಮಕ್ಕಳಿಗೆ ಆಲ್ಬೆಂಡಜೋಲ್ ಮಾತ್ರೆ ವಿತರಿಸಲಾಗುತ್ತಿದೆ. 1 ರಿಂದ 19 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಈ ಮಾತ್ರೆಯನ್ನು ನೀಡಲಾಗುತ್ತದೆ. ಶಾಲೆಗಳು, ಅಂಗನವಾಡಿ ಕೇಂದ್ರಗಳು ಸೇರಿದಂತೆ ವಿವಿಧೆಡೆ ಮಕ್ಕಳಿಗೆ ಮಾತ್ರೆ ವಿತರಿಸುವ ವ್ಯವಸ್ಥೆ ಮಾಡಲಾಗಿದೆ ಎಂದರು.

1 ರಿಂದ ಎರಡು ವರ್ಷದೊಳಗಿನ ಮಕ್ಕಳಿಗೆ ಅರ್ಧ ಮಾತ್ರೆ ಹಾಗೂ 2 ವರ್ಷದಿಂದ 19 ವರ್ಷದೊಳಗಿನ ಮಕ್ಕಳಿಗೆ ಒಂದು ಮಾತ್ರೆಯನ್ನು ನೀಡಲಾಗುತ್ತದೆ. ಪ್ರತಿ ಆರು ತಿಂಗಳಿಗೊಮ್ಮೆ ಈ ಮಾತ್ರೆಯನ್ನು ಮಕ್ಕಳಿಗೆ ನೀಡುವ ಮೂಲಕ ಜಂತುಹುಳು ಸೋಂಕಿನಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟಲು ಕ್ರಮವಹಿಸಲಾಗುತ್ತಿದೆ ಎಂದು ಹೇಳಿದರು.

ಜಂತುಹುಳು ನಿವಾರಣಾ ದಿನದಂದು ಮಾತ್ರೆ ಸೇವಿಸಲು ಸಾಧ್ಯವಾಗದ ಮಕ್ಕಳಿಗೆ ಆಗಸ್ಟ್ 17ರಂದು ನಡೆಯುವ ಮಾಪ್‌ಅಪ್ ದಿನದಂದು ಮಾತ್ರೆ ವಿತರಿಸಿ, ಯಾವುದೇ ಮಗು ಈ ಕಾರ್ಯಕ್ರಮದಿಂದ ವಂಚಿತವಾಗದಂತೆ ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆರ್. ಸಿ. ಹೆಚ್. ಅಧಿಕಾರಿಗಳಾದ ಡಾ.ಆಶಾಲತಾ, ಕ್ಯಾತುಂಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ. ಶಶಿಕಲಾ, ಕುಷ್ಠರೋಗ ನಿರ್ಮೂಲನಾಧಿಕಾರಿಗಳಾದ ಡಾ. ಸೋಮಶೇಖರ್, ಟಿ. ಹೆಚ್. ಒ ಡಾ. ಜವರೇಗೌಡ, ಡಾ. ಆನಂದ್, ಡಾ. ಕುಮಾರ್, ಆರೋಗ್ಯ ಶಿಕ್ಷಣಾಧಿಕಾರಿಗಳಾದ ವೇಣುಗೋಪಾಲ್ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು

# ಸಂಗೀತ ಕಲೆಗೆ ಭಾಷೆಯ ಹಂಗಿಲ್ಲ: ವಿನಯ್ ಕುಮಾರ್



**ಮಂಡ್ಯ:** ನಗರದ ಗಾಂಧಿ ಭವನದಲ್ಲಿ ಗುಡ್ ವಾಯ್ಸ್ ಸಂಗೀತ ಶಾಲೆ ಏರ್ಪಡಿಸಿದ್ದ ಶಾಲಾ ವಾರ್ಷಿಕೋತ್ಸವ ಹಾಗೂ ಕಲಾವಿದರಿಗೆ ಸನ್ಮಾನ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಅಧ್ಯಕ್ಷ ಎಂ.ವಿನಯ್ ಕುಮಾರ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಈಗ ಎಲ್ಲೆಡೆ ಜನಪ್ರಿಯ ವಾಗಿರುವ ಎ. ಐ.ತಂತ್ರಜ್ಞಾನದಿಂದ ಕಲಾವಿದರಿಗೆ ಯಾವ ಅಡ್ಡಿ, ತೊಂದರೆಯು, ಹಾಗೂ ಆತಂಕವು ಇಲ್ಲ. ಏಕೆಂದರೆ ಅದು ಕೃತಕ ಬುದ್ದಿ ಮತ್ತ ಮಾತ್ರ. ಅದರಲ್ಲಿ ಯಾವ ಭಾವನೆಯು ಇರುವುದಿಲ್ಲ ಹೀಗಾಗಿ ಸಾಧನೆಯ ಮೇಲೆ ಕಲಾವಿದರ ಭವಿಷ್ಯ ನಿಂತಿದೆ. ಉತ್ತಮ ಕಲಾವಿರಾಗಿ ವಿದ್ಯೆಯ ಜೊತೆಜೊತೆಗೆ ಸಂಗೀತ ಕಲಿಸುವ ಅವಕಾಶವನ್ನು ಮಕ್ಕಳ ಪೋಷಕರು ಕಲ್ಪಿಸಿಕೊಡಬೇಕು ಎಂದು ಸಲಹೆ ನೀಡಿದರು.

ಸಂಗೀತ ಕಲೆಗೆ ಯಾವುದೇ ಭಾಷೆಯ ಹಂಗಿಲ್ಲ ಹೀಗಾಗಿ ವಿದ್ಯಾರ್ಥಿಗಳು ಸೇರಿದಂತೆ ಕಲೆಯಲ್ಲಿ ಆಸಕ್ತಿಯುಳ್ಳ ಎಲ್ಲರೂ ಸಂಗೀತ, ವಾದ್ಯ ಕಲೆಗಳ ಕಲಿಕೆಯನ್ನು ಆರಂಭಿಸಿ ಸಾಧನೆ ಮಾಡಿ ಮಂಡ್ಯ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸುವತ್ತ ತೊಡಗಿಸಿಕೊಳ್ಳಬೇಕು. ಮಂಡ್ಯ ಜಿಲ್ಲೆಯ ಕಲಾ ಸಾಂಸ್ಕೃತಿಕ ಭವ್ಯ ಪರಂಪರೆಯನ್ನು ಹೆಚ್ಚಿಸುವಲ್ಲಿ ಮಂಡ್ಯ ನಗರದ ಸಂಗೀತ ಶಾಲೆಗಳು ಉತ್ತಮ ಶ್ರಮ ಹಾಕುತ್ತಿವೆ ಎಂದು ಗುಡ್ ವಾಯ್ಸ್ ಸಂಗೀತ ಶಾಲೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕೆನರಾ ಬ್ಯಾಂಕ್ ನ್ ನಿವೃತ್ತ ಮೆನೇಜರ್ ಚಂದ್ರಹಾಸ್, ಸಂಗೀತ ವು ಧ್ವನಿ, ಲಯ, ಮಧುರತೆ ಹಾಗೂ ಭಾವನೆಗಳ ಸಮ್ಮಿಶ್ರಣ ವಾಗಿದ್ದು ಮನುಷ್ಯನ ಪರಿಪೂರ್ಣತೆ ಯ ಸಂಕೇತವಾಗಿದೆ. ಲಲಿತ ಕಲೆಗಳಲ್ಲಿ ಸಂಗೀತ ಗಾಯನ ಹಾಗೂ ವಾದ್ಯ ಸಂಗೀತ ಮನಸ್ಸಿಗೆ ಶಾಂತಿ, ನೆಮ್ಮದಿ ನೀಡುವ ಏಕೈಕ ಶ್ರೇಷ್ಠ ಕಲೆಯಾಗಿದೆ ಎಂದು ಅಭಿಪ್ರಾಯಿಸಿದರು.

ಚೆನ್ನಾರಾಯಪಟ್ಟಣದ ಖ್ಯಾತ ಹಿರಿಯ ಜಾನಪದ ಗಾಯಕ ಶಿವನಗೌಡ ಪಾಟೀಲ್ ಹಾಗೂ ರಂಗ ಭೂಮಿ ತಬಲಾ ಕಲಾವಿದ ಜಿ.ಗಣೇಶ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಇತ್ತೀಚೆಗೆ ನಿಧನರಾದ ಭಾರತದ ಶ್ರೇಷ್ಠ ಹಿನ್ನೆಲೆ ಗಾಯಕಿ ಎಸ್.ಜಾನಕಿಯವರಿಗೆ ಒಂದು ನಿಮಿಷ ಆಚರಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಪ್ರೇರಣ ಸಂಸ್ಥೆಯ ರವಿಕುಮಾರ್, ಸಾಹಿತಿ ಚೆಲುವರಾಜು ಮಾತನಾಡಿದರು. ಕಾರ್ಯಕ್ರಮ ದ ಮುನ್ನ ಖ್ಯಾತ ಗಾಯಕ, ಕಲಾಶ್ರೀ ವಿದ್ಯಾಶಂಕರ್ ಮತ್ತು ತಂಡದಿಂದ ಗಾಯನ ಕಾರ್ಯಕ್ರಮ ಎಲ್ಲರನ್ನು ಮುದಗೊಳಿಸಿತು. ಗುಡ್ ವಾಯ್ಸ್ ಶಾಲೆಯ ವಿದ್ಯಾರ್ಥಿಗಳಿಗಳಿಂದ ಗಿಟಾರ್ ವಾದನ, ಕೀಬೋರ್ಡ್, ಹಾಗೂ ಗಾಯನ ಎಲ್ಲರನ್ನು ರಂಜಿಸಿತು. ಉಪನ್ಯಾಸಕ ಬಸವರಾಜ್ ಎಲ್ಲರನ್ನು ಸ್ವಾಗತಿಸಿದರು. ನಿವೃತ್ತ ಶಿಕ್ಷಕ ಕಿರುತೆರೆ ನಿರ್ದೇಶಕ ಜನಾರ್ಧನ ಕೊಂಡ್ಲಿ ಆಕರ್ಷಕವಾಗಿ ಕಾರ್ಯಕ್ರಮ ನಿರೂಪಿಸಿದರು. ಗುಡ್ ವಾಯ್ಸ್ ಶಾಲೆಯ ವ್ಯವಸ್ಥಾಪಕ ತರಬೇತುದಾರ ಸಿ. ದೇವರಾಜ್ ಭಾಗವಹಿಸಿದ್ದರು.

# ಆ.17ರಂದು ಮಂಡ್ಯದಲ್ಲಿ ಉಚಿತ ವಿಶೇಷ ಆರೋಗ್ಯ ತಪಾಸಣಾ ಶಿಬಿರ



**ಮಂಡ್ಯ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆದಿಚುಂಚನಗಿರಿ ಆಸ್ಪತ್ರೆ, ಬಿ.ಜಿ.ನಗರ, ನಾಗಮಂಗಲ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ, ಕಿದ್ವಾಯಿ ಸಂಸ್ಥೆ, ಬೆಂಗಳೂರು ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸಹಯೋಗದಲ್ಲಿ ಆಗಸ್ಟ್ 17ರಂದು ಮಂಡ್ಯ ನಗರದ ಶಂಕರಪುರದ ಸಂತೇಮಾಳ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಉಚಿತ ವಿಶೇಷ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದ್ದು ತಜ್ಞ ವೈದ್ಯಾಧಿಕಾರಿಗಳ ತಂಡದಿಂದ ವಿವಿಧ ಕಾಯಿಲೆಗಳಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸಾ ಸೌಲಭ್ಯ ಕಲ್ಪಿಸಲಾಗುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕರಾದ ಪಿ. ರವಿಕುಮಾರ್ ಅವರು ತಿಳಿಸಿದರು.

ಮಂಡ್ಯ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಉಚಿತ ವಿಶೇಷ ಆರೋಗ್ಯ ತಪಾಸಣಾ ಶಿಬಿರದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಿಬಿರಕ್ಕೆ ಆಗಮಿಸುವ ಸಾರ್ವಜನಿಕರಿಗೆ ಅಗತ್ಯ ಮೂಲಸೌಕರ್ಯ ಹಾಗೂ ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಶಿಬಿರದ ಕುರಿತು ಹೆಚ್ಚಿನ ಸಂಖ್ಯೆಯ ಜನರಿಗೆ ಮಾಹಿತಿ ತಲುಪಿಸುವ ಉದ್ದೇಶದಿಂದ ಆಟೋ ಪ್ರಚಾರ ಹಾಗೂ ಜಿಂಗಲ್ಸ್ ಮೂಲಕ ವ್ಯಾಪಕ ಜಾಗೃತಿ ಮೂಡಿಸಬೇಕು. ಗ್ರಾಮೀಣ ಹಾಗೂ ನಗರ ಪ್ರದೇಶದ ಸಾರ್ವಜನಿಕರು ಶಿಬಿರದಲ್ಲಿ ಭಾಗವಹಿಸಿ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆಯ ಸೌಲಭ್ಯ ಪಡೆದುಕೊಳ್ಳುವಂತೆ ಅರಿವು ಮೂಡಿಸಬೇಕು ಎಂದು ಹೇಳಿದರು.

ವಿಶೇಷವಾಗಿ ಹೃದಯ ಸಂಬಂಧಿ ಕಾಯಿಲೆಗಳು, ಕ್ಯಾನ್ಸರ್ ಸೇರಿದಂತೆ ವಿವಿಧ ಕಾಯಿಲೆಗಳಿಗೆ ತಜ್ಞ ವೈದ್ಯರಿಂದ ಉಚಿತ ತಪಾಸಣೆ ಮತ್ತು ಚಿಕಿತ್ಸೆ ದೊರೆಯಲಿದ್ದು, ಈ ಕುರಿತು ಸಾರ್ವಜನಿಕರಿಗೆ ಸಮರ್ಪಕ ಮಾಹಿತಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮಹಿಳೆಯರ ಅನುಕೂಲಕ್ಕಾಗಿ ಪ್ರತ್ಯೇಕ ತಪಾಸಣಾ ಹಾಗೂ ಚಿಕಿತ್ಸಾ ಕೇಂದ್ರಗಳನ್ನು ಸ್ಥಾಪಿಸಿ, ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ವ್ಯವಸ್ಥೆ ಕಲ್ಪಿಸಬೇಕು. ಶಿಬಿರಕ್ಕೆ ಆಗಮಿಸುವ ಸಾರ್ವಜನಿಕರಿಗೆ ಮಾರ್ಗದರ್ಶನ ಹಾಗೂ ಸಹಕಾರ ನೀಡಲು ಸ್ಕೌಟ್ಸ್ ಮತ್ತು ಗೈಡ್ಸ್‌ನ 50 ವಿದ್ಯಾರ್ಥಿಗಳನ್ನು ನಿಯೋಜಿಸುವಂತೆ ಸೂಚಿಸಿದರು.

ಅಪರ ಜಿಲ್ಲಾಧಿಕಾರಿಗಳಾದ ಬಿ.ಸಿ. ಶಿವಾನಂದಮೂರ್ತಿ ರವರು ಮಾತನಾಡಿ ಶಿಬಿರಕ್ಕೆ 3,500ಕ್ಕೂ ಹೆಚ್ಚು ಸಾರ್ವಜನಿಕರು ಆಗಮಿಸುವ ನಿರೀಕ್ಷೆಯಿರುವ ಹಿನ್ನೆಲೆಯಲ್ಲಿ ಸ್ಥಳದಲ್ಲಿ ಉತ್ತಮ ಸ್ವಚ್ಛತೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು ಎಂದು ತಿಳಿಸಿದರು. ದೂರದ ಪ್ರದೇಶಗಳಿಂದ ಆರೋಗ್ಯ ತಪಾಸಣೆಗೆ ಆಗಮಿಸುವ ಸಾರ್ವಜನಿಕರ ಅನುಕೂಲಕ್ಕಾಗಿ ಖಾಸಗಿ ಶಾಲೆಗಳ ಬಸ್‌ಗಳನ್ನು ಬಳಸಿಕೊಂಡು ಅಗತ್ಯ ಸಾರಿಗೆ ವ್ಯವಸ್ಥೆ ಕಲ್ಪಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಶಿಬಿರದ ಯಶಸ್ಸಿಗೆ ವಿವಿಧ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ, ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಲ್ಯಾಣಧಿಕಾರಿಗಳಾದ ಡಾ. ಬೆಟ್ಟಸ್ವಾಮಿ, ಆರ್. ಸಿ. ಹೆಚ್. ಅಧಿಕಾರಿಗಳಾದ ಡಾ. ಆಶಾಲತಾ ರವರು, ನಗರಸಭೆಯ ಪೌರಯುಕ್ತರಾದ ಯು. ಪಿ. ಪಂಪಶ್ರೀ ಮಂಡ್ಯ ತಹಸೀಲ್ದಾರ್ ರಾದ ವಿಶ್ವನಾಥ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಮಂಡ್ಯದಲ್ಲಿ ಸ್ತ್ರೀ ಮಾರ್ಟ್?

## ಮಹಿಳೆಯರ ಸ್ವಾವಲಂಬನೆಗೆ ಹೊಸ ವೇದಿಕೆ



**ಮಂಡ್ಯ:** ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಿ, ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಪೂರಕವಾದ ಅವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ ಮಂಡ್ಯ ನಗರದ ಗಾಂಧಿನಗರದಲ್ಲಿ ನೂತನವಾಗಿ ?ಸ್ತ್ರೀ ಮಾರ್ಟ್? ನಿರ್ಮಿಸಲು ಉದ್ದೇಶಿಸಲಾಗಿದ್ದು, ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ಪಿ. ರವಿಕುಮಾರ್ ಗೌಡ ಗಣಿಗ ಅವರು ಸೋಮವಾರ ಉದ್ದೇಶಿತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡುವ ನಿಟ್ಟಿನಲ್ಲಿ ?ಸ್ತ್ರೀ ಮಾರ್ಟ್? ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಮಹಿಳೆಯರು ಹಾಗೂ ಮಹಿಳಾ ಸ್ವಸಹಾಯ ಸಂಘಗಳು ತಯಾರಿಸುವ ವಿವಿಧ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವೇದಿಕೆ ಕಲ್ಪಿಸುವುದು ಮತ್ತು ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹ ನೀಡುವುದು ಯೋಜನೆಯ ಪ್ರಮುಖ ಆಶಯವಾಗಿದೆ.

ಸ್ಥಳ ಪರಿಶೀಲನೆ ನಡೆಸಿದ ಶಾಸಕ ಪಿ. ರವಿಕುಮಾರ್ ಗೌಡ ಗಣಿಗ ಅವರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಯೋಜನೆಯ ರೂಪುರೇಷೆ, ಸ್ಥಳದ ಲಭ್ಯತೆ ಹಾಗೂ ಅಗತ್ಯ ಮೂಲಸೌಕರ್ಯಗಳ ಕುರಿತು ಚರ್ಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾದಾಗ ಕುಟುಂಬ ಮತ್ತು ಸಮಾಜ ಎರಡೂ ಬಲಿಷ್ಠವಾಗುತ್ತವೆ. ಮಹಿಳೆಯರಿಗೆ ಸ್ವಂತ ಉದ್ಯೋಗ ಹಾಗೂ ಆದಾಯದ ಅವಕಾಶಗಳನ್ನು ಕಲ್ಪಿಸುವುದು ಅತ್ಯಂತ ಮುಖ್ಯ. ಅವರು ತಯಾರಿಸುವ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸೌಲಭ್ಯ ದೊರೆತರೆ ಅವರ ಆರ್ಥಿಕ ಚಟುವಟಿಕೆಗಳಿಗೆ ಮತ್ತಷ್ಟು ಉತ್ತೇಜನ ಸಿಗಲಿದೆ. ಈ ದೃಷ್ಟಿಯಿಂದ ಮಂಡ್ಯ ನಗರದಲ್ಲಿ ಸ್ತ್ರೀ ಮಾರ್ಟ್ ನಿರ್ಮಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

**ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹ:** ಮಹಿಳಾ ಸ್ವಸಹಾಯ ಸಂಘಗಳು ಮತ್ತು ಸಣ್ಣ ಪ್ರಮಾಣದ ಮಹಿಳಾ ಉದ್ಯಮಿಗಳು ತಯಾರಿಸುವ ಆಹಾರ ಪದಾರ್ಥಗಳು, ಕರಕುಶಲ ವಸ್ತುಗಳು, ಗೃಹೋಪಯೋಗಿ ಉತ್ಪನ್ನಗಳು ಸೇರಿದಂತೆ ವಿವಿಧ ಉತ್ಪನ್ನಗಳನ್ನು ಒಂದೇ ಸೂರಿನಡಿ ಗ್ರಾಹಕರಿಗೆ ತಲುಪಿಸಲು ಸ್ತ್ರೀ ಮಾರ್ಟ್ ಸಹಕಾರಿಯಾಗುವ ನಿರೀಕ್ಷೆಯಿದೆ.

ಮಹಿಳೆಯರು ಉತ್ಪಾದನೆಗೆ ಮಾತ್ರ ಸೀಮಿತವಾಗದೆ, ತಮ್ಮ ಉತ್ಪನ್ನಗಳ ಮಾರಾಟ ಮತ್ತು ಮಾರುಕಟ್ಟೆ ವ್ಯವಸ್ಥೆಯಲ್ಲಿಯೂ ನೇರವಾಗಿ ತೊಡಗಿಸಿಕೊಳ್ಳಲು ಅನುಕೂಲಕರವಾದ ವೇದಿಕೆಯನ್ನು ರೂಪಿಸುವುದು ಯೋಜನೆಯ ಆಶಯವಾಗಿದೆ. ಇದರಿಂದ ಮಹಿಳೆಯರಲ್ಲಿ ಉದ್ಯಮಶೀಲತೆ ಹೆಚ್ಚುವುದರ ಜೊತೆಗೆ ಸ್ಥಳೀಯವಾಗಿ ಉದ್ಯೋಗ ಮತ್ತು ಆದಾಯದ ಅವಕಾಶಗಳು ಸೃಷ್ಟಿಯಾಗಲಿವೆ.

?ಸ್ತ್ರೀ ಮಾರ್ಟ್? ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ನೆರವಾಗಬೇಕು ಮಹಿಳೆಯರಿಗೆ ಅವಕಾಶ ಮತ್ತು ಸೂಕ್ತ ವೇದಿಕೆ ಕಲ್ಪಿಸಿದರೆ ಅವರು ಸ್ವಾವಲಂಬಿಗಳಾಗಿ ಯಶಸ್ವಿ ಉದ್ಯಮಿಗಳಾಗಿ ಬೆಳೆಯಬಲ್ಲರು. ಸ್ತ್ರೀ ಮಾರ್ಟ್ ಕೇವಲ ವ್ಯಾಪಾರ ಮಳಿಗೆಯಾಗದೆ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮತ್ತು ಉದ್ಯಮಶೀಲತೆಗೆ ಉತ್ತೇಜನ ನೀಡುವ ಕೇಂದ್ರವಾಗಿ ರೂಪುಗೊಳ್ಳಬೇಕು ಎಂಬುದು ನಮ್ಮ ಆಶಯ ಇಂದು ಶಾಸಕರು ಅಭಿಪ್ರಾಯಪಟ್ಟರು.

**ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ**

**ಸ್ತ್ರೀ ಮಾರ್ಟ್:** ನಿರ್ಮಾಣಕ್ಕೆ ಉದ್ದೇಶಿಸಿರುವ ಗಾಂಧಿನಗರದ ಸ್ಥಳವನ್ನು ಪರಿಶೀಲಿಸಿದ ಶಾಸಕರು, ಯೋಜನೆಗೆ ಅಗತ್ಯವಿರುವ ಸೌಲಭ್ಯಗಳು ಹಾಗೂ ಮುಂದಿನ ಹಂತದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಯೋಜನೆಯ ಅನುಷ್ಠಾನದಲ್ಲಿ ಮಹಿಳೆಯರಿಗೆ ಹೆಚ್ಚಿನ ಅನುಕೂಲವಾಗುವಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಸಮರ್ಪಕ ಯೋಜನೆ ರೂಪಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಮಂಡ್ಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ನಂದಿನಿ, ಮಂಡ್ಯ ನಗರಸಭೆ ಆಯುಕ್ತ ಪಂಪಶ್ರೀ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳು ಸ್ಥಳದಲ್ಲಿ ಹಾಜರಿದ್ದು, ಉದ್ದೇಶಿತ ಯೋಜನೆಯ ಕುರಿತು ಪರಿಶೀಲನೆ ನಡೆಸಿದರು.

# ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿದ... ಶರಣರ ದಸರಯ್ಯ



ವೀಣಾ ಹೇಮಂತ್‌ಗೌಡ ಪಾಟೀಲ್

ಉಪೇಕ್ಷಿತ ವಚನಕಾರರು

ಶರಣ ಧರ್ಮದಲ್ಲಿ ನಂಬಿಕೆಯಿಟ್ಟು ಬಸವಣ್ಣನವರ ಶರಣ ಬಳಗದಲ್ಲಿ ಒಬ್ಬರು 12ನೇ ಶತಮಾನದ ದಸರಯ್ಯನವರು. ಮೂಲತಃ ಪೂಜೆಗೆ ಬೇಕಾಗುವ ಹೂಗಳನ್ನು ಕೊಯಿದು ತಂದು ಮನೆ ಮನೆಗೆ ನೀಡುವ ಕಾಯಕವನ್ನು ಮಾಡುತ್ತಿದ್ದರು. ದಯವೇ ಧರ್ಮದ ಮೂಲ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವುದು ಶರಣ ಧರ್ಮದ ಸುವರ್ಣಸೂತ್ರ ಎಂಬುದು ಅವರ ಬದುಕಿನಿಂದ ನಾವು ಕಾಣಬಹುದು.

ಇತರರನ್ನು ಪೀಡಿಸುವುದರಲ್ಲಿ ಸುಖವನ್ನು ಕಾಣುತ್ತಿದ್ದ ಮಂಡಗೈ ಹೊಂದಿದ ಮೋಟಮಲ್ಲುಗ ಎಂಬ ಬುದ್ಧಿಗೇಡಿ ಮನುಷ್ಯನೊಬ್ಬನನ್ನು ಆತನ ಮತಿಗೇಡಿ ಸ್ನೇಹಿತರು ದಸರಯ್ಯನನ್ನು ಪೀಡಿಸಲು ಹುರಿದುಂಬಿಸಿದರು. ಇದಕ್ಕೆ ಒಪ್ಪಿಕೊಂಡ ಮೋಟಮಲ್ಲುಗ ತಲೆಗೂದಲನ್ನು ಬೋಳಿಸಿ, ಕಾವಿಯುಟ್ಟು, ಭಸ್ಮ ಬಳಿದು, ರುದ್ರಾಕ್ಷಿ ಸರವನ್ನು ಸುತ್ತಿಕೊಂಡು ಜಂಗಮನ ವೇಷ ಧರಿಸಿ ಕೊರಳಲ್ಲಿ ಲಿಂಗವಿಲ್ಲದ ಕರಡಿಗೆಯನ್ನು ಕಟ್ಟಿಕೊಂಡು ಬಂದನು. ಮೊದಲೇ ಮೋಟಾಗಿದ್ದ ತನ್ನ ಕೈಗಳಿಂದ ತನಗೆ ನಮಸ್ಕರಿಸಿದ ದಸರಯ್ಯನವರನ್ನು ಒಂದೇ ಸಮನೆ ಗುದ್ದಲಾರಂಭಿಸಿದನು. ಸನ್ಯಾಸಿ ವೇಷ ಧರಿಸಿದ ಗುರುಗಳು ತನಗೆ ಒಂದೇ ಸಮನೆ ಗುದ್ದುತ್ತಿದ್ದರೆ ಅದಕ್ಕೆ ತನ್ನ ಮೈಯನ್ನು ಒಡ್ಡಿ ದಸರಯ್ಯನವರು ಸುಮ್ಮನೆ ಕುಳಿತರು. ಗುದ್ದಿ ಗುದ್ದಿ ಸಾಕಾದ ಮೋಟಮಲ್ಲುಗ ದಣಿದು ಸುಮ್ಮನೆ ಕುಳಿತಾಗ ಆತನ ಕೈಗಳು ನೊಂದು ಹೋದವೇನೋ ಎಂದು ದಸರಯ್ಯನವರು ಮೆಲುವಾಗಿ ಆತನ ಕೈಗಳನ್ನು ಒತ್ತಲಾರಂಬಿಸಿದರು. ಇದೀಗ ಮೋಟಮಲ್ಲುಗನ ಕ್ರೌರ್ಯ ಭಾವ ಕರಗಿ ನೀರಾಗಿ



ಹರಿದು ಹೋಯಿತು. ಆತ ದಸರಯ್ಯನವರ ಕಾಲಿಗೆ ಬಿದ್ದು ಕ್ಷಮೆ ಕೋರಿದನು. ಆದರೆ ಕಪಟ ವೇಷ ಧರಿಸಿ ಜಂಗಮನಾದ ಆತ ನಿಜ ಜಂಗಮನೆ ಆಗಿ ಹೋದ ಕಾರಣ ದಸರಯ್ಯನವರ ಕೀರ್ತಿ ಎಲ್ಲೆಡೆ ಹಬ್ಬಿತು.

ತಮ್ಮ ವೃತ್ತಿ ಧರ್ಮವನ್ನು ನಡೆಸುತ್ತಿದ್ದ ದಸರಯ್ಯನವರು ಅದೊಂದು ದಿನ ಹೂದೋಟದಲ್ಲಿ ಪೂಜೆಗೆ ಬೇಕಾದ ಹೂಗಳನ್ನು ಬಿಡಿಸಿಕೊಳ್ಳುತ್ತಿರುವಾಗ ಹೂವು ನೊಂದ ಹಾಗೆ ಭಾಸವಾಯಿತು. ಸಕಲ ಜೀವಾತ್ಮರಿಗೂ ಲೇಸನ್ನು ಬಯಸುತ್ತಿದ್ದ ತನ್ನಿಂದ ಹೂವಿನ ಹೃದಯಕ್ಕೆ ನೋವಾಯಿತು ಎಂಬಂತೆ ದಸರಯ್ಯನವರಿಗೆ ಭಾಸವಾಯಿತು. ಅಂದಿನಿಂದ ಅವರು ಹೂಗಳನ್ನು ಹರಿಯುವುದನ್ನೇ ಬಿಟ್ಟರು. ಗಾಳಿಯ ಬೀಸುವಿಕೆಗೆ ಬಿದ್ದ ಪುಷ್ಪಗಳನ್ನು ಆರಿಸಿ ತಂದು ಲಿಂಗಕ್ಕೆ ಅರ್ಪಿಸಲು ಆರಂಭಿಸಿದರು.

ಇವರ ಈ ದಯಾ ಭಾವಕ್ಕೆ ಪತ್ನಿ ವೀರಮ್ಮನವರು ಕೂಡ ಪುಷ್ಟಿ ನೀಡಿದರು. ಆಕೆ ಕೂಡ ಶರಣ ಧರ್ಮವನ್ನು ಒಪ್ಪಿ ಅಪ್ಪಿಕೊಂಡಾಕೆ.

ಈ ಕುರಿತು ಶಿವಲಿಂಗಕ್ಕೆ ವಚನವೊಂದರ ಮೂಲಕ ದಸರಯ್ಯನವರು

ಕುದುರೆ ಬೀಳುವನ್ನಕ್ಕ ನಿನ್ನ ಹಂಗಯ್ಯ
ಉದುರಿ ಬಿದ್ದ ಬಳಿಕ ಎನ್ನೊಡವೆಯ ತಂದೆ
ತರುಲತೆ ಸ್ಥಾವರ ಜೀವಂಗಳೆಲ್ಲ
ನಿನ್ನ ಕಾರುಣ್ಯದಿಂದ ಒಗೆದವು
ಅವ ಹರಿದು ಇನ್ನಾರಿಗರ್ಪಿಸುವೆ ತೊಟ್ಟು ಬೀಳುವನ್ನಕ್ಕ ?

ಎಂದು ತಮ್ಮ ವಚನದಲ್ಲಿ ಹೇಳಿದ್ದಾರೆ.

ಹೂಗಳು ಮರದಲ್ಲಿ ಇರುವವರೆಗೆ, ಬಳ್ಳಿಯಲ್ಲಿ ಅರಳಿರುವವರೆಗೆ ಅವು ದೇವರವು, ಆದರೆ ಉದುರಿ ಬಿದ್ದ ಮೇಲೆ ಅವು ಉಳಿದವರ ಪಾಲು. ಆಗ ಮಾತ್ರ ಅವುಗಳನ್ನು ನಮ್ಮದು ಎಂದು ಭಾವಿಸಿ ದೇವರಿಗೆ ಅರ್ಪಿಸಬಹುದು ಎಂದು ಹೇಳುವ ಅವರು ಮುಂದುವರೆದು ಬಾಡಿದ ಹೂ ಬೇಡ ಮರದ ಹೂವು ಮಾತ್ರ ಬೇಕೆಂದು ನೀನು ಬಯಸಿದರೆ ನಿನ್ನಲ್ಲೂ ಆಸೆ ಮೂಡಿ ನೀನು ದೈವತ್ವವನ್ನು ಕಳೆದುಕೊಂಡು ನೀನೇ ಭಕ್ತನಾಗುವೆ ಎಂದು ದೇವರನ್ನೇ ಎಚ್ಚರಿಸುತ್ತಾರೆ.

ಶರಣ ದಸರಯ್ಯನವರು ದಸರೇಶ್ವರ ಲಿಂಗ ಎಂಬ ಅಂಕಿತದಿಂದ ತಮ್ಮ ವಚನಗಳನ್ನು ರಚಿಸಿದ್ದಾರೆ. ಸಾಮಾನ್ಯ ಮನುಷ್ಯನೋರ್ವ ಅಸಾಮಾನ್ಯನಾಗಿ ಬದಲಾಗುವ ಪ್ರಕ್ರಿಯೆಯನ್ನು ನಾವು ದಸರಯ್ಯನವರ ಬದುಕಿನಿಂದ ಕಾಣಬಹುದು.

ಹೂವು, ಹಣ್ಣು, ಗಿಡ-ಮರಗಳಲ್ಲಿ ಜೀವ ಭಾವವನ್ನು ಕಂಡ ದಸರಯ್ಯನವರ ದಯಾದೃಷ್ಟಿ, ವಿಶ್ವ ವ್ಯಾಪಕವಾಗುತ್ತಾ ನಡೆದು ಅಹಿಂಸಾ ಭಾವ ಅನಂತವಾಗುತ್ತಾ ನಡೆಯಿತು. ರಸ್ತೆಯಲ್ಲಿ ನಡೆಯುವಾಗ ಕ್ರಿಮಿ ಕೀಟಗಳಿಗೆ ಹತ್ಯೆಯಾದೀತು ಎಂಬ ಭಾವ ಆತನಲ್ಲಿ ವ್ಯಾಕುಲತೆ ವ್ಯಾಪಕವಾಯಿತು. ಬರ ಬರುತ್ತಾ ಆತ ಅಹಿಂಸೆಯ ಅಪರವತಾರವಾದ. ಆತನ ಅಹಿಂಸೆ ಶ್ರದ್ಧೆಯಿಂದ ಉದ್ಭವಿಸಿದ್ದು ಮಾತ್ರವಲ್ಲ... ಬುದ್ಧಿಯಲ್ಲಿ ಕೂಡ ಬೆಳೆಯಿತು ಎಂಬುದಕ್ಕೆ ಕೆಳಗಿನ ವಚನವೇ ಸಾಕ್ಷಿ.

**ಸರ್ವವನರಿದಲ್ಲಿ ಸರ್ವಜ್ಞನಾದಲ್ಲಿ**
**ಇದಿರೆಲ್ಲ ತನ್ನಲ್ಲಿ ತಾನೆಲ್ಲ ಇದಿರಲ್ಲಿ**
**ತನ್ನ ಭಿನ್ನ ಭಾವ ಅನ್ಯರಲ್ಲಿ ತೋರಿ**
**ಆ ಗುಣ ತನ್ನನೇ ಅನ್ಯವೆನಿಸುವುದು**
**ಕನ್ನಯ್ಯ ಶಾಂತಿ ಅನ್ಯರಲ್ಲಿ ತೋರಿ**
**ಅಲ್ಲಿ ಭಿನ್ನಭಾವವಿಲ್ಲದಿರೇ ಅವರನ್ಯವಲ್ಲ**
**ಎಮ್ಮವರೆಂಬರು... ಅದು ತನ್ನ ಗುಣ ಅನ್ಯವಿಲ್ಲ**

ಎಂಬುದನರಿದಲ್ಲಿ ತನ್ನೊಪ್ಪ ದರ್ಪಣದಲ್ಲಿ ತೋರುವಂತೆ ಇದಕ್ಕೆ ಸಂದೇಹವಿಲ್ಲ ದಸರೇಶ್ವರ ಲಿಂಗವನರಿವುದಕ್ಕೆ

ವಚನ ಸಾಹಿತ್ಯದಲ್ಲಿ ತನ್ನದೇ ಆದ ವಿಶೇಷ




ಪಾತ್ರವನ್ನು ಹೊಂದಿರುವ ದಸರಯ್ಯನವರು ಮಾನವತೆಯ ಮೂಲ ಸೂತ್ರವನ್ನು ಬಿತ್ತರಿಸಿದ್ದಾರೆ. ನಾವು ಯಾವ ರೂಪವನ್ನು ಹೊಂದಿರುತ್ತವೆಯೋ ಅದನ್ನೇ ದರ್ಪಣವು ಪ್ರತಿಬಿಂಬಿಸುತ್ತದೆ. ನಾವು ಮತ್ತೊಬ್ಬರ ಮನದ ಮುಖದಲ್ಲಿ ಬೀರಿದ ಭಾವವನ್ನೇ ಅದು ಬಿಂಬಿಸುತ್ತದೆ. ತನ್ನವರೆಲ್ಲರೂ ಎಂಬುದು ತನ್ನನ್ನೇ ಅವಲಂಬಿಸಿದೆ. ಎಲ್ಲರೂ ನನ್ನವರೆಂದು ತಿಳಿದರೆ ನನ್ನವರಾಗುತ್ತಾರೆ ಅನ್ಯರೆಂದು ತಿಳಿದರೆ ಅನ್ಯರಾಗುತ್ತಾರೆ ಮುಖ್ಯವಾಗಿ ಬೇಕಾದದ್ದು ಸಮತ್ವ ದರ್ಶನ ಈ ಸಮದರ್ಶನ ಸಿದ್ದಿಸಿದರೆ ಸಹಜೀವನ ತಾನಾಗಿಯೇ ತಲೆದೋರುತ್ತದೆ ಎಂದು ದಸರಯ್ಯನವರು ತಮ್ಮ ವಚನದಲ್ಲಿ ಹೇಳುತ್ತಾರೆ.

**ದಯಾಘನ ಶರಣ ದಸರಯ್ಯನವರಿಗೆ ಶರಣು**

**ಶರಣಾರ್ಥಿ**

# ಸರಗೂರು ಲಯನ್ಸ್ ಕ್ಲಬ್ ಗೆ ನೂತನ ಅಧ್ಯಕ್ಷರ ಆಯ್ಕೆ

**ಸರಗೂರು:** ಲಯನ್ಸ್ ಕ್ಲಬ್ ಗೆ 2026-27 ನೇ ಸಾಲಿಗೆ ನೂತನ ಅಧ್ಯಕ್ಷರಾಗಿ ಲಯನ್ ಕೆ ಸುರೇಶ್ ಜೈನ್ ರವರು ಆಯ್ಕೆಯಾಗಿರುತ್ತಾರೆ. ನೂತನ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಲಯನ್ ಎಸ್ ಬಿ ನಾಗರಾಜುರವರ ಅಧ್ಯಕ್ಷತೆಯಲ್ಲಿ ಪದಗ್ರಹಣ ಸಮಾರಂಭವನ್ನು ಲಯನ್ಸ್ ಅಕಾಡೆಮಿ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿತ್ತು. ನೂತನ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಲಯನ್ ಸಿದ್ದೇಗೌಡ ರವರು ಪ್ರತಿಜ್ಞಾವಿಧಿಯನ್ನು ಬೋಧಿಸಿ ಸರಗೂರು ಲಯನ್ಸ್ ಕ್ಲಬ್ ಉತ್ತಮ ಸೇವೆಯನ್ನು ಮಾಡುತ್ತಿದ್ದು ಗ್ರಾಮೀಣ ಭಾಗದ ಜನರಿಗೆ ಅತ್ಯಮೂಲ್ಯವಾದ ಆರೋಗ್ಯ ಮತ್ತು ಶಿಕ್ಷಣ ಸೇವೆಯನ್ನು ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದರು

ಇದೇ ಸಂದರ್ಭದಲ್ಲಿ ವಿಶೇಷ ಅತಿಥಿಗಳಾಗಿ ಉಪಸ್ಥಿತರಿದ್ದ ಪಿ ಎಸ್ ಟಿ ಫೋರಂ ಅಧ್ಯಕ್ಷರಾದ ಲಯನ್ ಜಯ ಕುಮಾರ್ ಅವರು ಮಾತನಾಡಿ ಶಿಕ್ಷಣ ಮತ್ತು ಆರೋಗ್ಯಕ್ಕೆ ನಮ್ಮ ಸಂಸ್ಥೆ ಮೊದಲ ಆದ್ಯತೆಯನ್ನು ನೀಡುತ್ತಿದೆ ಈ ನಿಟ್ಟಿನಲ್ಲಿ ಸರಗೂರು ಲಯನ್ ಸಂಸ್ಥೆ ಮುಂಚೂಣಿಯಲ್ಲಿದ್ದು ಸಮಾಜಕ್ಕೆ ಬೇಕಾದ ಸೇವೆಗಳನ್ನು ಮೊದಲ ಆದ್ಯತೆಯ ಮೇರೆಗೆ ನೀಡುತ್ತಿರುವುದು ಪ್ರಸಂಶನೀಯ ಎಂದು ಅಭಿಪ್ರಾಯಪಟ್ಟರು. ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸುರೇಶ್ ರವರು ತಮ್ಮ ತಂದೆ ತಾಯಿಯ ಸ್ಮರಣಾರ್ಥವಾಗಿ ಲಯನ್ಸ್ ಅಕಾಡೆಮಿ ಶಾಲೆಗೆ 51,000ಗಳನ್ನು ದೇಣಿಗೆಯಾಗಿ ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಈ ಕಾರ್ಯಕ್ರಮವನ್ನು ಕುರಿತು ಲಯನ್ಸ್ ಕ್ಲಬ್ ಸಂತೆ ಸರಗೂರಿನ ಕಾರ್ಯದರ್ಶಿ ಲಯನ್ ಎಸ್ ಎಸ್ ಪ್ರಭುಸ್ವಾಮಿ ರವರು ಮಾತನಾಡಿ ನಮ್ಮ ಸಂಸ್ಥೆಯ ಶಾಶ್ವತ ಕ್ರಿಯಾಶೀಲ ಯೋಜನೆಯಾದ ಲಯನ್ಸ್ ಅಕಾಡೆಮಿ ಶಾಲೆಯು ಎಸ್ ಎಸ್ ಎಲ್ ಸಿ ಯಲ್ಲಿ ಪ್ರತಿ ವರ್ಷವೂ ನೂರಕ್ಕೆ ನೂರರಷ್ಟು ಫಲಿತಾಂಶವನ್ನು ಪಡೆಯುತ್ತಿದ್ದು ಇಡೀ ತಾಲೂಕಿನಲ್ಲಿಯೇ ಅತ್ಯುತ್ತಮ ಸ್ಥಾನವನ್ನು ಪಡೆದಿರುತ್ತದೆ ಇದಕ್ಕೆ ನಮ್ಮ ಶಾಲೆಯ ನುರಿತ ಶಿಕ್ಷಕರೇ ಕಾರಣ ಹಾಗೂ ನಮ್ಮ ಸಂಸ್ಥೆಯಲ್ಲಿ ವಾರ್ಷಿಕವಾಗಿ 25 ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನೀಡುತ್ತಿದ್ದೇವೆ. ಈ ಮಹತ್ಕಾರ್ಯವು ನಮಗೆ ಆತ್ಮ ಪೂರಕವಾಗಿ ಸಂತೋಷವನ್ನು ನೀಡಿದೆ ಎಂದರು. ಈ ಕಾರ್ಯಕ್ರಮದಲ್ಲಿ ಲಯನ್ಸ್ ಅಕಾಡೆಮಿ ಶಾಲೆಯ ಮ್ಯಾನೇಜಿಂಗ್ ಟ್ರಸ್ಟಿ ಲಯನ್ ಬ್ರಹ್ಮದೇವಯ್ಯ ಪ್ರಾದೇಶಿಕ -2ರ ಅಧ್ಯಕ್ಷರಾದ ಲಯನ್ ಜಯಕುಮಾರ್ ವಲಯ-1ರ ಅಧ್ಯಕ್ಷರಾದ ಡಾ ಕೆ ಬಿ ಲಿಂಗರಾಜು ವಿವೇಕಾನಂದ ಸ್ಮಾರಕ ಆಸ್ಪತ್ರೆಯ ಡಾ ಸಂಧ್ಯಾ ಲಯನ್ಸ್ ಕ್ಲಬ್ ಸಂತೆ ಸರಗೂರಿನ ಮಾಜಿ ಅಧ್ಯಕ್ಷರಾದ ಲಯನ್ ಎಸ್ ವಿ ಯೋಗೀಶ್, ಲಯನ್ ಎನ್ ಎಸ್ ಪ್ರತಾಪ್, ಲಯನ್ ಎಸ್ ಎಸ್ ಸೋಮ ಪ್ರಭ, ಲಯನ್ ಎಸ್ ನಾರಾಯಣ, ಲಯನ್ ಎಸ್ ಪಿ ಪ್ರಸಾದ್ ಲಯನ್ ಎಸ್ ಎನ್ ಮೋಹನ್ ಕುಮಾರ್, ಲಯನ್ ಎಂ ಕೆ ಹರಿದಾಸ್, ಸದಸ್ಯರಾದ ಲಯನ್ ಎಸ್ ಬಿ ಸಮಂತ್, ಪುರಸಭಾ ಸದಸ್ಯರಾದ ಶ್ರೀನಿವಾಸ್, ಎಚ್ ಡಿ ಕೋಟೆ ಲಯನ್ಸ್ ಕ್ಲಬ್ ನ ಸದಸ್ಯರಾದ ಭಾಸ್ಕರ್ ಶಾಲಾ ಶಿಕ್ಷಕರು ಇನ್ನಿತರರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

# ಬೆಳಕಿನವೇಗದಗೆಲುವು:ಬೋಲ್ಟ



ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 92

ಯಶಸ್ಸು ಎಂಬುದು ಆಕಸ್ಮಿಕವಲ್ಲ, ಅದು ವ್ಯವಸ್ಥಿತ ತರಬೇತಿ, ದೈಹಿಕ ಸಾಮರ್ಥ್ಯ ಮತ್ತು ಮಾನಸಿಕ ಛಲದ ಸಂಯೋಜನೆ. ಈ ತ್ರಿವೇಣಿ ಸಂಗಮಕ್ಕೆ ಉತ್ತಮ ನಿದರ್ಶನ ವಿಶ್ವದ ಅತಿ ವೇಗದ ಮನುಷ್ಯ ಉಸೇನ್ ಬೋಲ್ಟ್. ಜಮೈಕಾದ ಟ್ರೆಲಾವ್ನಿ ಜಿಲ್ಲೆಯ ಸಾಧಾರಣ ಕುಟುಂಬದಿಂದ ಬಂದ ಬೋಲ್ಟ್, ಕ್ರೀಡಾ ವಿಜ್ಞಾನ ಮತ್ತು ನಿರಂತರ ಅಭ್ಯಾಸದಿಂದ ಜಗತ್ತಿನ ಅಥ್ಲೆಟಿಕ್ಸ್ ಇತಿಹಾಸವನ್ನೇ ಮರುವ್ಯಾಖ್ಯಾನಿಸಿದವರು.

ಕ್ರೀಡಾ ದೃಷ್ಟಿಕೋನದಿಂದ ಬೋಲ್ಟ್ ಅವರ ಸವಾಲುಗಳು ಇನ್ನಷ್ಟು ಮಹತ್ವ ಪಡೆಯುತ್ತವೆ. ಸ್ಕೋಲಿಯೋಸಿಸ್‌ನಿಂದಾಗಿ ಅವರ ದೇಹದಲ್ಲಿ ಅಸಮತೋಲನವಿತ್ತು. ಒಬ್ಬ ಸ್ಪ್ರಿಂಟರ್‌ಗೆ ಅದು ದೊಡ್ಡ ಪ್ರತಿಬಂಧ. ಆದರೆ ಕ್ರೀಡಾ ವೈದ್ಯಕೀಯ ತಂಡ, ಫಿಜಿಯೋಥೆರಪಿ ಮತ್ತು ಕೋರ್ ಸ್ಟ್ರೆಂತ್ ತರಬೇತಿಯ ಮೂಲಕ ಅವರು ಈ ದೌರ್ಬಲ್ಯವನ್ನು ಸರಿದೂಗಿಸಿದರು. 1.96 ಮೀ. ಎತ್ತರದ ಸ್ಪ್ರಿಂಟರ್‌ಗೆ ಸಾಮಾನ್ಯವಾಗಿ ಸ್ಟಾರ್ಟ್ ನಿಧಾನವಾಗುತ್ತದೆ. ಆದರೆ ಬೋಲ್ಟ್ ತನ್ನ ಉದ್ದನೆಯ ಹೆಜ್ಜೆ ಮತ್ತು ಗರಿಷ್ಠ ವೇಗದಲ್ಲಿ ನೆಲೆಸುವ ಸಾಮರ್ಥ್ಯವನ್ನು ಆಯುಧವಾಗಿಸಿಕೊಂಡರು. ಇದು ತಾಂತ್ರಿಕ ಹೊಂದಾಣಿಕೆಯ ಪರಿಪಕ್ವತೆಗೆ ಉದಾಹರಣೆ.

ಸಾಧನೆ ಸಂಖ್ಯೆಗಳು ಅವರ ಪ್ರಾಬಲ್ಯವನ್ನು ಹೇಳುತ್ತವೆ. 2009ರ ಬರ್ಲಿನ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ 100 ಮೀ. ಅನ್ನು 9.58 ಸೆಕೆಂಡುಗಳಲ್ಲಿ ಓಡಿದ ದಾಖಲೆ ಇಂದಿಗೂ ಅಜೇಯ. ಬೀಜಿಂಗ್ 2008, ಲಂಡನ್ 2012, ರಿಯೋ 2016 – ಸತತ ಮೂರು ಒಲಿಂಪಿಕ್ಸ್‌ನಲ್ಲಿ 100 ಮೀ., 200 ಮೀ.




ಮತ್ತು 4ಥ100 ಮೀ. ರಿಲೇಯಲ್ಲಿ 8 ಚಿನ್ನ. ಕೇವಲ ವೇಗವಲ್ಲ, ಒತ್ತಡದ ಕ್ಷಣದಲ್ಲಿ ಸ್ಥಿರತೆ ಕಾಯ್ದುಕೊಳ್ಳುವ ಮಾನಸಿಕ ದೃಢತೆ ಅವರನ್ನು ಚಾಂಪಿಯನ್ ಮಾಡಿತು.

ಬೋಲ್ಟ್ ಅವರ ಮಾತು ಕ್ರೀಡಾ ತತ್ವಶಾಸ್ತ್ರವಾಗಿದೆ: "ನಾನು 9 ಸೆಕೆಂಡು ಓಡಲು 4 ವರ್ಷ ಅಭ್ಯಾಸ ಮಾಡಿದೆ". ಇದು ತ್ವರಿತ ಫಲಾಪೇಕ್ಷೆಯ ಯುಗಕ್ಕೆ ಪ್ರಮುಖ ಸಂದೇಶ. ಸೌಲಭ್ಯದ ಕೊರತೆ, ದೈಹಿಕ ಮಿತಿಗಳನ್ನು ನೆಪವಾಗಿಸದೆ, ವಿಜ್ಞಾನ ಆಧಾರಿತ ತರಬೇತಿ ಮತ್ತು ಅಚಲ ಗುರಿಯೊಂದಿಗೆ ಶ್ರಮಿಸಿದರೆ ಯಾವುದೇ ಅಡೆತಡೆವೂ ಮೆಟ್ಟಿಲಾಗುತ್ತದೆ. ಬೋಲ್ಟ್ ತೋರಿಸಿಕೊಟ್ಟದ್ದು ಅದೇ.

# ಮನಸ್ಸು ಕಸದ ಬುಟ್ಟಿಯಲ್ಲ ; ಬೇಕಾದುದನ್ನಷ್ಟೇ ಉಳಿಸಿಕೊಳ್ಳಿ



ಶಿವಬಸಪ್ಪ ಗು ಜಂಗಾಲಿ




ಮನೆಗೆ ಕಸ ಬಂದಾಗ ನಾವು ಅದನ್ನು ಹಾಗೆಯೇ ಒಳಗೆ ಇಟ್ಟುಕೊಳ್ಳುವುದಿಲ್ಲ. ಪ್ರತಿದಿನ ಕಸವನ್ನು ಹೊರಗೆ ಹಾಕುತ್ತೇವೆ. ಮನೆಯ ಸ್ವಚ್ಛತೆ ನಮ್ಮ ಆರೋಗ್ಯಕ್ಕೆ ಎಷ್ಟು ಮುಖ್ಯವೋ, ಮನಸ್ಸಿನ ಸ್ವಚ್ಛತೆಯೂ ನಮ್ಮ ಬದುಕಿನ ನೆಮ್ಮದಿಗೆ ಅಷ್ಟೇ ಮುಖ್ಯ. ಆದರೆ ವಿಚಿತ್ರವೆಂದರೆ, ಮನೆಯ ಕಸವನ್ನು ಹೊರಹಾಕಲು ನಾವು ತೋರಿಸುವ ಕಾಳಜಿಯನ್ನು ಮನಸ್ಸಿನ ಕಸವನ್ನು ಹೊರಹಾಕುವಲ್ಲಿ ತೋರಿಸುವುದಿಲ್ಲ. ಯಾರೋ ಆಡಿದ ಒಂದು ಕಟುವಾದ ಮಾತು, ನಡೆದ ಒಂದು ಕೆಟ್ಟ ಘಟನೆ, ಸಿಕ್ಕ ಒಂದು ಅವಮಾನ, ಮುರಿದ ಸಂಬಂಧ, ಈಡೇರದ ಕನಸು, ಹಳೆಯ ನೋವು ಇವೆಲ್ಲವನ್ನೂ ವರ್ಷಗಳವರೆಗೆ ಮನಸ್ಸಿನೊಳಗೆ ಇಟ್ಟುಕೊಂಡು ಬದುಕುತ್ತೇವೆ. ಆದರೆ ನೆನಪಿರಲಿ ಮನಸ್ಸು ಕಸದ ಬುಟ್ಟಿಯಲ್ಲ; ಬೇಕಾದುದನ್ನಷ್ಟೇ ಉಳಿಸಿಕೊಳ್ಳಬೇಕು.

ಮನುಷ್ಯನ ಮನಸ್ಸು ಬಹಳ ಸೂಕ್ಷ್ಮವಾದ ಜಾಗ. ಅಲ್ಲಿ ನಾವು ಏನು ತುಂಬಿಸುತ್ತೇವೋ, ಅದೇ ನಮ್ಮ ಯೋಚನೆಗಳಲ್ಲಿ, ಮಾತುಗಳಲ್ಲಿ ಮತ್ತು ನಡೆಗಳಲ್ಲಿ ಪ್ರತಿಬಿಂಬಿಸುತ್ತದೆ. ಒಳ್ಳೆಯ ನೆನಪುಗಳನ್ನು ಉಳಿಸಿಕೊಂಡರೆ ಮನಸ್ಸಿಗೆ ಉಲ್ಲಾಸ ಬರುತ್ತದೆ. ಕೃತಜ್ಞತೆಯನ್ನು ಬೆಳೆಸಿಕೊಂಡರೆ ಬದುಕಿನ ಸಣ್ಣ ಸಂತೋಷಗಳೂ ದೊಡ್ಡದಾಗಿ ಕಾಣುತ್ತವೆ. ಆದರೆ ದ್ವೇಷ, ಅಸೂಯೆ, ಕೋಪ, ಭಯ, ಪಶ್ಚಾತ್ತಾಪ ಮತ್ತು ನಕಾರಾತ್ಮಕ ಮಾತುಗಳನ್ನು ನಿರಂತರವಾಗಿ ಮನಸ್ಸಿನಲ್ಲಿ ಸಂಗ್ರಹಿಸಿಕೊಂಡರೆ, ಹೊರಗೆ ಎಲ್ಲವೂ ಸರಿಯಾಗಿದ್ದರೂ ಒಳಗೆ ಮಾತ್ರ ಅಶಾಂತಿ ನೆಲೆಸುತ್ತದೆ.

ನಮ್ಮ ಮನಸ್ಸನ್ನು ಒಂದು ಮನೆಯಂತೆ ಕಲ್ಪಿಸಿಕೊಳ್ಳಿ. ಮನೆಗೆ ಬರುವ ಪ್ರತಿಯೊಬ್ಬರನ್ನೂ ಒಳಗೆ ಕರೆದುಕೊಂಡು, ಅವರು ತಂದದ್ದನ್ನೆಲ್ಲ ಅಲ್ಲಿ ಇಟ್ಟುಕೊಳ್ಳುತ್ತಾ ಹೋದರೆ ಕೆಲವೇ ದಿನಗಳಲ್ಲಿ ಮನೆ ತುಂಬಿಬಿಡುತ್ತದೆ. ಹಾಗೆಯೇ ನಮ್ಮ ಜೀವನದಲ್ಲೂ ಪ್ರತಿಯೊಬ್ಬರ ಮಾತು, ಪ್ರತಿಯೊಂದು ಅಭಿಪ್ರಾಯ, ಪ್ರತಿಯೊಂದು ಟೀಕೆ, ಪ್ರತಿಯೊಂದು ಘಟನೆ ಮತ್ತು ಪ್ರತಿಯೊಂದು ನೋವನ್ನು ಮನಸ್ಸಿನೊಳಗೆ ಸಂಗ್ರಹಿಸುತ್ತಾ ಹೋದರೆ, ಹೊಸ ಸಂತೋಷಕ್ಕೆ ಜಾಗವೇ ಉಳಿಯುವುದಿಲ್ಲ. ಆದ್ದರಿಂದ ಮನಸ್ಸಿನ ಬಾಗಿಲಿಗೂ ಒಂದು ವಿವೇಕದ ಕಾವಲುಗಾರ ಬೇಕು. ಯಾರು ಏನು ತಂದರು ಎಂಬುದಕ್ಕಿಂತ, ಅದರಲ್ಲಿ ನಮಗೆ ಬೇಕಾದುದು ಏನು ಎಂಬುದನ್ನು ಗುರುತಿಸುವ ಸಾಮರ್ಥ್ಯ ಬೇಕು.

ಯಾರೋ ನಿಮ್ಮನ್ನು ಟೀಕಿಸಿದ್ದಾರೆ. ಆ ಮಾತು ನಿಜವಾಗಿದ್ದರೆ ಅದರಿಂದ ಪಾಠ ಕಲಿಯಿರಿ. ತಪ್ಪಾಗಿದ್ದರೆ ಅಲ್ಲಿಯೇ ಬಿಟ್ಟುಬಿಡಿ. ಆದರೆ ಆ ಮಾತನ್ನು ದಿನವೂ ನೆನಪಿಸಿಕೊಂಡು ನಿಮ್ಮನ್ನು ನೀವೇ ನೋಯಿಸಿಕೊಳ್ಳುವುದೇಕೆ ಯಾರಾದರೂ ನಿಮ್ಮನ್ನು ಅವಮಾನಿಸಿದ್ದಾರೆ. ಆ ಘಟನೆ ನಿಮಗೆ ನೋವು ಕೊಟ್ಟಿರಬಹುದು. ಆದರೆ ಆ ಅವಮಾನವನ್ನು ವರ್ಷಗಳವರೆಗೆ ಹೊತ್ತುಕೊಂಡು ನಡೆಯುವುದರಿಂದ ನೋವು ಕೊಟ್ಟ ವ್ಯಕ್ತಿಗೆ ಏನೂ ಆಗುವುದಿಲ್ಲ; ನಿಮ್ಮ ಮನಸ್ಸಿಗೆ ಮಾತ್ರ ಭಾರವಾಗುತ್ತದೆ. ಆದ್ದರಿಂದ ಪ್ರತಿಯೊಂದು ಮಾತಿಗೂ ಮನಸ್ಸಿನಲ್ಲಿ ಶಾಶ್ವತ ವಿಳಾಸ ನೀಡುವ ಅಗತ್ಯವಿಲ್ಲ.

ಕ್ಷಮಿಸುವುದು ಎಂದರೆ ನಡೆದದ್ದನ್ನು ಸರಿಯೆಂದು ಒಪ್ಪಿಕೊಳ್ಳುವುದಲ್ಲ. ಕ್ಷಮಿಸುವುದು ಎಂದರೆ ಆ ಘಟನೆಯ ಬಂಧನದಿಂದ ನಮ್ಮ ಮನಸ್ಸನ್ನು ಬಿಡುಗಡೆ ಮಾಡುವುದು. ಕೆಲವೊಮ್ಮೆ ನಾವು ಮತ್ತೊಬ್ಬರನ್ನು ಶಿಕ್ಷಿಸಬೇಕು ಎಂದುಕೊಂಡು ದ್ವೇಷವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತೇವೆ. ಆದರೆ ದ್ವೇಷದ ಭಾರವನ್ನು ಹೊರುವವನು ಕೊನೆಗೆ ನಾವೇ. ನಮ್ಮ ನೆಮ್ಮದಿ ಕಳೆದುಹೋಗುತ್ತದೆ; ಹಳೆಯ ಘಟನೆಗಳು ಹೊಸ ಸಂಬಂಧಗಳ ಮೇಲೂ ನೆರಳು ಬೀರುತ್ತವೆ. ಹೀಗಾಗಿ ಕೆಲವರನ್ನು ಕ್ಷಮಿಸಿ ದೂರದಿಂದಲೇ ಇರಬೇಕು. ಪ್ರತಿಯೊಬ್ಬರನ್ನು ಮತ್ತೆ ನಮ್ಮ ಬದುಕಿನೊಳಗೆ ಕರೆದುಕೊಳ್ಳುವುದೇ ಕ್ಷಮೆಯ ಅರ್ಥವಲ್ಲ.

ಅದೇ ರೀತಿ ಹಳೆಯ ನೆನಪುಗಳಿಗೂ ಒಂದು ಮಿತಿ ಇರಬೇಕು. ಬಾಲ್ಯದ ಸುಂದರ ದಿನಗಳು, ಹೆತ್ತವರ ಪ್ರೀತಿ, ಸ್ನೇಹಿತರ ಜೊತೆ ಕಳೆದ ಕ್ಷಣಗಳು, ಜೀವನದ ಮೊದಲ ಯಶಸ್ಸು, ಯಾರಾದರೂ ನೀಡಿದ ಪ್ರೋತ್ಸಾಹ ಇಂತಹ ನೆನಪುಗಳು ಮನಸ್ಸಿಗೆ ಬೆಳಕು ಕೊಡುತ್ತವೆ. ಅವುಗಳನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವುದರಲ್ಲಿ ತಪ್ಪಿಲ್ಲ. ಆದರೆ ನಮ್ಮನ್ನು ಮುರಿದ ಘಟನೆಗಳನ್ನು ಪ್ರತಿದಿನ ಮನಸ್ಸಿನ ಪರದೆಯ ಮೇಲೆ ಪ್ರದರ್ಶಿಸುತ್ತಾ ಕುಳಿತರೆ, ವರ್ತಮಾನವನ್ನು ಕಳೆದುಕೊಳ್ಳುತ್ತೇವೆ. ನೆನಪುಗಳು ನಮ್ಮ ಜೊತೆ ನಡೆಯಬೇಕೇ ಹೊರತು, ನಮ್ಮನ್ನು ಹಿಂದಕ್ಕೆ ಎಳೆಯಬಾರದು.

ಬದುಕು ಹಿಂದಿನ ಪುಟಗಳಲ್ಲಿ ನಿಲ್ಲುವುದಿಲ್ಲ. ಪುಸ್ತಕದ ಹಳೆಯ ಪುಟಗಳನ್ನು ಓದಬಹುದು; ಆದರೆ ಜೀವನವನ್ನು ಮುಂದಿನ ಪುಟಗಳಲ್ಲಿ ಬರೆಯಬೇಕು. ನಿನ್ನೆ ನಡೆದದ್ದು ನಮ್ಮ ಅನುಭವವಾಗಬಹುದು, ಆದರೆ ಅದು ನಮ್ಮ ಭವಿಷ್ಯದ ಶಿಕ್ಷೆಯಾಗಬಾರದು. ಜೀವನದ ಪ್ರತಿದಿನವೂ ಹೊಸ ಪುಟ. ಆ ಪುಟವನ್ನು ಹಳೆಯ ನೋವಿನಿಂದ ತುಂಬಬೇಕೋ, ಹೊಸ ನಿರೀಕ್ಷೆಯಿಂದ ತುಂಬಬೇಕೋ ಎಂಬ ಆಯ್ಕೆ ನಮ್ಮದೇ.

ಕೆಲವರು ತಮ್ಮ ಮನಸ್ಸಿನಲ್ಲಿ ಇತರರ ಅಭಿಪ್ರಾಯಗಳನ್ನೂ ತುಂಬಿಕೊಂಡಿರುತ್ತಾರೆ. ಅವನು ಹೀಗೆ ಹೇಳಿದ , ಅವರು ನನ್ನ ಬಗ್ಗೆ ಹೀಗೆ ಅಂದುಕೊಂಡಿದ್ದಾರೆ , ಪಕ್ಕದವರು ಏನು ಹೇಳುತ್ತಾರೆ , ಬಂಧುಗಳು ಏನು ಯೋಚಿಸುತ್ತಾರೆ ಇಂತಹ ಪ್ರಶ್ನೆಗಳು ಮನಸ್ಸನ್ನು ನಿಧಾನವಾಗಿ ಬಂಧಿಸುತ್ತವೆ. ಪ್ರತಿಯೊಬ್ಬರ ಅಭಿಪ್ರಾಯವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತಾ ಹೋದರೆ, ಕೊನೆಗೆ ನಮ್ಮದೇ ಧ್ವನಿ ಕೇಳಿಸದೆ ಹೋಗುತ್ತದೆ. ಬದುಕು ನಮ್ಮದು; ಆದ್ದರಿಂದ ನಮ್ಮ ನಿರ್ಧಾರಗಳ ಹೊಣೆಗಾರಿಕೆಯೂ ನಮ್ಮದೇ ಆಗಿರಬೇಕು.

ನಮ್ಮ ಬಗ್ಗೆ ಎಲ್ಲರೂ ಒಳ್ಳೆಯದನ್ನೇ ಮಾತನಾಡಬೇಕು ಎಂಬ ನಿರೀಕ್ಷೆ ವ್ಯರ್ಥ. ನಾವು ಎಷ್ಟೇ ಒಳ್ಳೆಯ ಕೆಲಸ ಮಾಡಿದರೂ ಯಾರಿಗಾದರೂ ಅದು ಇಷ್ಟವಾಗದೇ ಇರಬಹುದು. ಸೂರ್ಯ ಎಲ್ಲರಿಗೂ ಬೆಳಕು ಕೊಡುತ್ತಾನೆ; ಆದರೂ ಕೆಲವರು ನೆರಳನ್ನು ಹುಡುಕುತ್ತಾರೆ. ಹಾಗೆಯೇ ನಮ್ಮ ಒಳ್ಳೆಯತನವನ್ನು ಎಲ್ಲರೂ ಒಂದೇ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದಿಲ್ಲ. ಆದ್ದರಿಂದ ಎಲ್ಲರ ಮೆಚ್ಚುಗೆಯನ್ನು ಸಂಗ್ರಹಿಸುವುದಕ್ಕಿಂತ, ನಮ್ಮ ಆತ್ಮಸಾಕ್ಷಿಯ ಒಪ್ಪಿಗೆಯನ್ನು ಉಳಿಸಿಕೊಳ್ಳುವುದು ಮುಖ್ಯ.

ಮನಸ್ಸಿಗೆ ಬರುವ ಪ್ರತಿಯೊಂದು ಯೋಚನೆಯೂ ಸತ್ಯವಲ್ಲ. ಕೆಲವೊಮ್ಮೆ ಭಯ ನಮ್ಮನ್ನು ಕೆಟ್ಟದ್ದೇ ನಡೆಯುತ್ತದೆ ಎಂದು ನಂಬಿಸುತ್ತದೆ. ಕೆಲವೊಮ್ಮೆ ಅನುಮಾನ ನಮ್ಮ ಸಂಬಂಧಗಳನ್ನು ದುರ್ಬಲಗೊಳಿಸುತ್ತದೆ. ಕೆಲವೊಮ್ಮೆ ಹಳೆಯ ಅನುಭವ ಹೊಸ ಅವಕಾಶಗಳನ್ನೇ ತಿರಸ್ಕರಿಸುವಂತೆ ಮಾಡುತ್ತದೆ. ಆದ್ದರಿಂದ ಮನಸ್ಸಿನಲ್ಲಿ ಒಂದು ಯೋಚನೆ ಬಂದ ತಕ್ಷಣ ಅದನ್ನು ಸತ್ಯವೆಂದು ಒಪ್ಪಿಕೊಳ್ಳಬಾರದು. ಯೋಚನೆಗಳನ್ನು ಪರಿಶೀಲಿಸಬೇಕು. ಉಪಯುಕ್ತವಾದುದನ್ನು ಉಳಿಸಬೇಕು; ನಿರರ್ಥಕವಾದುದನ್ನು ಬಿಡಬೇಕು.

ಕಷ್ಟದ ಸಮಯದಲ್ಲಿ ಇದು ಇನ್ನಷ್ಟು ಮುಖ್ಯ. ಒಂದು ಸಮಸ್ಯೆ ಎದುರಾದಾಗ ಇದು ಎಂದಿಗೂ ಬದಲಾಗುವುದಿಲ್ಲ ಎಂದುಕೊಳ್ಳುವುದು ಸುಲಭ. ಆದರೆ ಜೀವನದಲ್ಲಿ ಯಾವುದೂ ಶಾಶ್ವತವಲ್ಲ. ಪರಿಸ್ಥಿತಿಗಳು ಬದಲಾಗುತ್ತವೆ. ಜನರು ಬದಲಾಗುತ್ತಾರೆ. ಅವಕಾಶಗಳು ಬರುತ್ತವೆ. ನಮ್ಮ ಸಾಮರ್ಥ್ಯವೂ ಬೆಳೆಯುತ್ತದೆ. ಇಂದು ಅಸಾಧ್ಯವೆನಿಸುವ ವಿಷಯ ನಾಳೆ ಸಾಧ್ಯವಾಗಬಹುದು. ಹೀಗಾಗಿ ತಾತ್ಕಾಲಿಕ ಸಮಸ್ಯೆಯನ್ನು ಶಾಶ್ವತ ಸತ್ಯವೆಂದು ಮನಸ್ಸಿನಲ್ಲಿ ಸಂಗ್ರಹಿಸಬಾರದು.

ನಮ್ಮ ಮನಸ್ಸಿನ ಸ್ವಚ್ಛತೆಗೆ ಕೆಲವೊಮ್ಮೆ ಇಲ್ಲ ಎನ್ನುವುದನ್ನೂ ಕಲಿಯಬೇಕು. ಎಲ್ಲರ ಸಮಸ್ಯೆಯನ್ನು ನಮ್ಮ ಸಮಸ್ಯೆಯನ್ನಾಗಿ ಮಾಡಿಕೊಳ್ಳಬಾರದು. ಎಲ್ಲರ ದುಃಖವನ್ನು ನಮ್ಮ ಭುಜದ ಮೇಲೆ ಹೊತ್ತುಕೊಳ್ಳಲು ಸಾಧ್ಯವಿಲ್ಲ. ಸಹಾನುಭೂತಿ ಇರಲಿ; ಆದರೆ ಆತ್ಮಶಾಂತಿಯನ್ನೇ ಕಳೆದುಕೊಳ್ಳುವಷ್ಟು ಭಾರ ಹೊತ್ತುಕೊಳ್ಳಬಾರದು. ಮತ್ತೊಬ್ಬರಿಗೆ ಸಹಾಯ ಮಾಡುವುದು ಒಳ್ಳೆಯದು; ಆದರೆ ನಮ್ಮ ಮನಸ್ಸನ್ನು ಸಂಪೂರ್ಣವಾಗಿ ಖಾಲಿ ಮಾಡಿಕೊಂಡು ಬದುಕುವುದು ಒಳ್ಳೆಯದಲ್ಲ.

ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಮನಸ್ಸಿಗೆ ಬರುವ ಕಸದ ಪ್ರಮಾಣ ಇನ್ನಷ್ಟು ಹೆಚ್ಚಾಗಿದೆ. ಪ್ರತಿದಿನ ಸಾವಿರಾರು ಸುದ್ದಿಗಳು, ಅಭಿಪ್ರಾಯಗಳು, ವಾದಗಳು, ಟೀಕೆಗಳು, ಹೋಲಿಕೆಗಳು ಮತ್ತು ಆತಂಕಕಾರಿ ವಿಷಯಗಳು ನಮ್ಮ ಕಣ್ಣ ಮುಂದೆ ಬರುತ್ತವೆ. ಪ್ರತಿಯೊಂದನ್ನೂ ಮನಸ್ಸಿನೊಳಗೆ ತೆಗೆದುಕೊಂಡರೆ ನೆಮ್ಮದಿಗೆ ಜಾಗವೇ ಉಳಿಯುವುದಿಲ್ಲ. ಎಲ್ಲವನ್ನೂ ತಿಳಿದುಕೊಳ್ಳುವುದು ಜ್ಞಾನವಲ್ಲ; ಯಾವುದನ್ನು ಗಮನಿಸಬೇಕು ಮತ್ತು ಯಾವುದನ್ನು ನಿರ್ಲಕ್ಷಿಸಬೇಕು ಎಂಬ ವಿವೇಕವೂ ಜ್ಞಾನದ ಭಾಗವೇ.

ಕೆಲವೊಮ್ಮೆ ನಮ್ಮ ಮನಸ್ಸಿಗೆ ವಿಶ್ರಾಂತಿ ಬೇಕಾಗುತ್ತದೆ. ಮೌನವಾಗಿ ಕುಳಿತುಕೊಳ್ಳುವುದು, ಪ್ರಕೃತಿಯನ್ನು ನೋಡುವುದು, ಪುಸ್ತಕ ಓದುವುದು, ಪ್ರೀತಿಪಾತ್ರರೊಂದಿಗೆ ಮಾತನಾಡುವುದು, ನಮ್ಮ ಇಷ್ಟದ ಕೆಲಸ ಮಾಡುವುದು ಇಂತಹ ಸರಳ ಸಂಗತಿಗಳು ಮನಸ್ಸಿನ ಧೂಳನ್ನು ತೊಳೆದುಹಾಕುತ್ತವೆ. ದೇಹಕ್ಕೆ ಪ್ರತಿದಿನ ಸ್ವಚ್ಛತೆ ಬೇಕಾದಂತೆ, ಮನಸ್ಸಿಗೂ ಅನಗತ್ಯ ಯೋಚನೆಗಳಿಂದ ಮುಕ್ತಿ ನೀಡುವ ಅಭ್ಯಾಸ ಬೇಕು. ಮನಸ್ಸಿನಲ್ಲಿ ಕೃತಜ್ಞತೆಯನ್ನೂ ಸಂಗ್ರಹಿಸಿಕೊಳ್ಳಿ. ನಿಮಗೆ ಸಹಾಯ ಮಾಡಿದವರನ್ನು ನೆನಪಿಸಿಕೊಳ್ಳಿ. ನಿಮ್ಮ ಕಷ್ಟದ ಸಮಯದಲ್ಲಿ ಕೈಹಿಡಿದವರನ್ನು ಮರೆಯಬೇಡಿ. ನಿಮ್ಮನ್ನು ನಂಬಿದವರ ಮಾತುಗಳನ್ನು ನೆನಪಿಸಿಕೊಳ್ಳಿ. ಇಂತಹ ನೆನಪುಗಳು ಮನಸ್ಸನ್ನು ಶ್ರೀಮಂತಗೊಳಿಸುತ್ತವೆ. ಹಣದಿಂದ ತುಂಬಿದ ಮನಸ್ಸಿಗಿಂತ ಕೃತಜ್ಞತೆಯಿಂದ ತುಂಬಿದ ಮನಸ್ಸು ಹೆಚ್ಚು ಸುಂದರ.

ಅದೇ ಸಮಯದಲ್ಲಿ ನಿಮ್ಮ ತಪ್ಪುಗಳನ್ನೂ ಸದಾ ಹೊತ್ತುಕೊಳ್ಳಬೇಡಿ. ತಪ್ಪು ಮಾಡಿದರೆ ಒಪ್ಪಿಕೊಳ್ಳಿ, ಸಾಧ್ಯವಾದರೆ ಸರಿಪಡಿಸಿ, ಪಾಠ ಕಲಿಯಿರಿ ಮತ್ತು ಮುಂದೆ ಸಾಗಿರಿ. ತಪ್ಪು ನಮ್ಮ ಗುರುವಾಗಬೇಕು; ನಮ್ಮ ಜೀವನದ ಜೈಲರ್ ಆಗಬಾರದು. ನಾನು ಅಂದು ಹಾಗೆ ಮಾಡಬಾರದಿತ್ತು ಎಂದು ಪ್ರತಿದಿನ ನಿಮ್ಮನ್ನೇ ಶಿಕ್ಷಿಸುತ್ತಾ ಹೋದರೆ, ಇಂದಿನ ದಿನವೂ ಕಳೆದುಹೋಗುತ್ತದೆ. ನಿನ್ನೆ ಮಾಡಿದ ತಪ್ಪನ್ನು ಇಂದು ಸರಿಪಡಿಸುವ ಅವಕಾಶವೇ ಜೀವನದ ಸೌಂದರ್ಯ.

ಮನಸ್ಸಿನಲ್ಲಿ ಜಾಗವನ್ನು ಖಾಲಿ ಮಾಡುವುದು ಎಂದರೆ ಎಲ್ಲವನ್ನೂ ಮರೆತುಬಿಡುವುದು ಅಲ್ಲ. ಅದು ಯಾವುದಕ್ಕೆ ಎಷ್ಟು ಜಾಗ ಕೊಡಬೇಕು ಎಂಬುದನ್ನು ಕಲಿಯುವುದು. ಕೆಲವು ಜನರಿಗೆ ನಮ್ಮ ಜೀವನದಲ್ಲಿ ಶಾಶ್ವತ ಸ್ಥಾನ ಇರಬಹುದು. ಕೆಲವರಿಗೆ ಒಂದು ಅಧ್ಯಾಯದಷ್ಟು ಜಾಗ ಸಾಕಾಗಬಹುದು. ಕೆಲವು ನೆನಪುಗಳು ಹೃದಯದಲ್ಲಿ ಉಳಿಯಬಹುದು. ಕೆಲವು ಘಟನೆಗಳು ಪಾಠವಾಗಿ ಮಾತ್ರ ಉಳಿಯಬೇಕು. ಈ ಆಯ್ಕೆಯೇ ಮಾನಸಿಕ ಪ್ರೌಢತೆ.

ನಮ್ಮ ಮನಸ್ಸು ಒಂದು ತೋಟದಂತಿದೆ. ಒಳ್ಳೆಯ ಬೀಜಗಳನ್ನು ಬಿತ್ತಿದರೆ ಹೂವು ಅರಳುತ್ತದೆ. ಕಳೆಗಳನ್ನು ಬೆಳೆಸಿದರೆ ತೋಟವೇ ಮುಚ್ಚಿಹೋಗುತ್ತದೆ. ಪ್ರತಿದಿನ ನಮ್ಮ ಯೋಚನೆಗಳ ತೋಟದಲ್ಲಿ ಏನು ಬೆಳೆಯುತ್ತಿದೆ ಎಂಬುದನ್ನು ಗಮನಿಸಬೇಕು. ಕೋಪದ ಕಳೆ ಕಂಡರೆ ಕಿತ್ತುಹಾಕಬೇಕು. ಅಸೂಯೆಯ ಮುಳ್ಳು ಕಂಡರೆ ತೆಗೆದುಹಾಕಬೇಕು. ಭಯದ ಗಿಡ ಬೆಳೆದರೆ ಧೈರ್ಯದ ನೀರು ಹಾಕಬೇಕು. ಪ್ರೀತಿಯ ಹೂವು, ಕೃತಜ್ಞತೆಯ ಎಲೆ, ಆಶೆಯ ಮೊಗ್ಗು ಮತ್ತು ನಂಬಿಕೆಯ ಮರವನ್ನು ಬೆಳೆಸಬೇಕು.

ಕೊನೆಗೆ ಒಂದು ಮಾತು ನೆನಪಿರಲಿ ನಿಮ್ಮ ಮನಸ್ಸು ಎಲ್ಲರ ಮಾತುಗಳನ್ನು ಸಂಗ್ರಹಿಸಿಡುವ ಗೋದಾಮಲ್ಲ. ಅದು ನಿಮ್ಮ ಬದುಕಿನ ಅತ್ಯಂತ ಅಮೂಲ್ಯವಾದ ಮನೆ. ಅಲ್ಲಿ ಯಾರಾದರೂ ಕೋಪವನ್ನು ಬಿಟ್ಟುಹೋದರೆ ಅದನ್ನು ಕಾಪಾಡುವ ಅಗತ್ಯವಿಲ್ಲ. ಯಾರಾದರೂ ಅವಮಾನವನ್ನು ಎಸೆದರೆ ಅದನ್ನು ಎತ್ತಿಕೊಂಡು ವರ್ಷಗಳವರೆಗೆ ಹೊತ್ತುಕೊಳ್ಳಬೇಡಿ. ಯಾರಾದರೂ ನಕಾರಾತ್ಮಕತೆಯನ್ನು ನೀಡಿದರೆ ಅದನ್ನು ನಿಮ್ಮ ಸ್ವಭಾವವನ್ನಾಗಿಸಿಕೊಳ್ಳಬೇಡಿ.

ಮನಸ್ಸಿನ ಬಾಗಿಲು ಎಲ್ಲರಿಗೂ ತೆರೆದಿರಬಹುದು; ಆದರೆ ಒಳಗೆ ಏನನ್ನು ಉಳಿಸಿಕೊಳ್ಳಬೇಕು ಎಂಬ ನಿರ್ಧಾರ ಮಾತ್ರ ನಮ್ಮದೇ ಆಗಿರಬೇಕು. ಜೀವನ ಚಿಕ್ಕದು. ಅದನ್ನು ಹಳೆಯ ನೋವುಗಳ ಗೋದಾಮಾಗಿಸದೆ, ಹೊಸ ಕನಸುಗಳ ಮನೆಯನ್ನಾಗಿ ಮಾಡೋಣ. ಮನಸ್ಸಿನಲ್ಲಿ ಕಸ ಕಡಿಮೆಯಾದಷ್ಟು ನೆಮ್ಮದಿ ಹೆಚ್ಚಾಗುತ್ತದೆ; ಅನಗತ್ಯ ನೆನಪುಗಳು ಹೊರಹೋದಷ್ಟು ಹೊಸ ಸಂತೋಷಗಳಿಗೆ ಜಾಗ ಸಿಗುತ್ತದೆ. ಆದ್ದರಿಂದ ಪ್ರತಿದಿನ ನಿಮ್ಮ ಮನಸ್ಸಿಗೆ ಒಂದು ಪ್ರಶ್ನೆ ಕೇಳಿ ಇದು ನನ್ನ ಬದುಕಿಗೆ ಬೇಕೇ ಬೇಕಿದ್ದರೆ ಉಳಿಸಿಕೊಳ್ಳಿ; ಬೇಡವಾದರೆ ನಗುಮುಖದಿಂದ ಬಿಟ್ಟುಬಿಡಿ. ಏಕೆಂದರೆ ಮನಸ್ಸು ಕಸದ ಬುಟ್ಟಿಯಲ್ಲ; ಅದು ನಮ್ಮ ಬದುಕಿನ ದೇವಾಲಯ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,